ಸಂಪುಟ: 06 ಸಂಚಿಕೆ: 121 ಪುಟಗಳು: 08 ಮಂಗಳವಾರ 14 ಜುಲೈ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಪ್ರಾಮಾಣಿಕತೆ ಮತ್ತು ಪ್ರೀತಿಗಳನ್ನು ಸಮಪ್ರಮಾಣದಲ್ಲಿ ಬೆರೆಸಿ ಮಾಡಿದ ಎಲ್ಲಾ ಕೆಲಸಗಳೂ ಯಶಸ್ವಿನತ್ತಲೇ ಸಾಗುತ್ತವೆ. ಕೆಲಸವನ್ನು ಪ್ರೀತಿಸೋಣ!

# ಉದಯ ವಾಹಿನಿ

UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ಬೆಂಗಳೂರಲ್ಲಿ ಮಿತಿಮೀರಿದ ಅನ್ಯ ಭಾಷಿಗರ ಹಾವಳಿ

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಅನ್ಯ ಭಾಷಿಗರ ದಬ್ಬಾಳಿಕೆ ಮತ್ತು ವ್ಯಾಪಾರ ದಂಧೆ ನೋಡಿದರೆ ನೀವು ಬೆಚ್ಚಿ ಬೀಳುತ್ತೀರ. ಬೆಂಗಳೂರಿನ ನಾನಾ ಕಡೆಗಳಲ್ಲಿ ಕಂಡುಬರುವ ಪಾನಿಪುರಿ ಗಾಡಿಗಳು ಬಹುತೇಕ ಉತ್ತರಭಾರತದವರದ್ದೇ ಆಗಿರುತ್ತವೆ?. ಅಂಕಿಅಂಶಗಳ ಪ್ರಕಾರ ಉತ್ತರಪ್ರದೇಶ, ಬಿಹಾರ, ರಾಜಸ್ಥಾನ ಮೂಲದವರೇ ಹೆಚ್ಚಾಗಿದ್ದು,ಒಂದೇ ವ್ಯಕ್ತಿ ಸುಮಾರು 4 ಸಾವಿರ ತಳ್ಳುವ ಗಾಡಿ ಪಾನಿಪುರ ಅಂಗಡಿಗಳನ್ನು ತೆರೆದಿದ್ದು, ಪ್ರತಿದಿನ ಒಂದಕ್ಕೆ 300 ರೂ.ನಂತೆ ಬಾಡಿಗೆ ಪಡೆಯುತ್ತಿರುವ ಬಗ್ಗೆ ಮಾಹಿತಿ ಹರಿದಾಡುತ್ತಿದೆ.

ಒಂದು ದಿನಕ್ಕೆ 300 ರೂ. ಬಾಡಿಗೆ ಎಂದರೂ ನಾಲ್ಕು ಸಾವಿರ ಗಾಡಿಗಳಿಂದ 1.20 ಲಕ್ಷ ರೂ. ದುಡಿಯುತ್ತಿದ್ದಾನೆ. ಬಹುತೇಕ ಫುಟ್‌ಪಾತ್‌ಗಳಲ್ಲೇ ವ್ಯಾಪಾರ ನಡೆಸುತ್ತಿದ್ದು, ಇವರಿಗೆ ಹೇಳೋರು, ಕೇಳೋರು ಯಾರು ಇಲ್ಲದಂತಾಗಿದೆ. ಇಡೀ ದಂಧೆ ಅನ್ಯಭಾಷಿಗರದೇ ದರ್ಬಾರ್ ಆಗಿದೆ. ಸಚಿವ ಕೃಷ್ಣಬೈರೇಗೌಡ ಅವರು ಫುಟ್‌ಪಾತ್ ಒತ್ತುವರಿಯನ್ನು ತೆರವುಗೊಳಿಸುವ ದಿಟ್ಟ ನಿರ್ಧಾರ ಕೈಗೊಂಡಿರುವುದರಿಂದ ಇಂತಹ ಅಕ್ರಮಗಳು ಬೆಳಕಿಗೆ ಬರುತ್ತಿದೆ.

ಕನ್ನಡಿಗರು ಎಚ್ಚೆತ್ತುಕೊಳ್ಳಬೇಕು.

## ಅಯೋಧ್ಯೆ ಹುಂಡಿ ಕಳ್ಳತನ ಪ್ರಕರಣ ಬೆನ್ನಲ್ಲೇ ಎಚ್ಚೆತ್ತ ರಾಜ್ಯ ಸರ್ಕಾರ; ದೇವಾಲಯಗಳ ಹುಂಡಿ, ದೇಣಿಗೆ ರಕ್ಷಣೆಗೆ ವಿಸ್ತೃತ ಮಾರ್ಗಸೂಚಿ ಬಿಡುಗಡೆ

• ಉದಯವಾಹಿನಿ, ಬೆಂಗಳೂರು



ಅಯೋಧ್ಯೆ ರಾಮ ಮಂದಿರದಲ್ಲಿ ಹುಂಡಿ ಕಳ್ಳತನ ಪ್ರಕರಣ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ರಾಜ್ಯದ ಮುಜರಾಯಿ ದೇವಾಲಯಗಳ ಹುಂಡಿ ಹಣ, ದೇಣಿಗೆ ರಕ್ಷಣೆಗೆ ಮುಂದಾಗಿದೆ. ಭದ್ರತೆ, ಪಾರದರ್ಶಕತೆ ಕಾಪಾಡಲು ವಿಸ್ತೃತ ಎಸ್‌ಒಪಿ (ಮಾರ್ಗಸೂಚಿ) ಬಿಡುಗಡೆ ಮಾಡಿದೆ.

ಆದೇಶದಲ್ಲಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿನ ವಿದ್ಯಮಾನಗಳಿಂದ ದೇವಾಲಯಗಳ ಹುಂಡಿಗಳಲ್ಲಿ ಕಳ್ಳತನವಾಗುತ್ತಿರುವ ಬಗ್ಗೆ ಮತ್ತು ಅವುಗಳ ಸುರಕ್ಷತೆ ಕುರಿತಂತೆ ವಿವಿಧ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವುದು ಹಾಗೂ ರಾಜ್ಯದ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯ ದೇವಾಲಯಗಳಲ್ಲಿ ಹುಂಡಿ ಎಣಿಕೆ/ ಲೆಕ್ಕಪತ್ರ ನಿರ್ವಹಣೆ ಸಂದರ್ಭದಲ್ಲಿ ಕಳ್ಳತನ ಮತ್ತು ಹಣ ದುರುಪಯೋಗವಾಗುತ್ತಿರುವುದು ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ, ರಾಜ್ಯದ ದೇವಾಲಯಗಳ ಚರಾಸ್ತಿಗಳ ಸಂರಕ್ಷಣೆ ಬಗ್ಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಮುನ್ನೆಚ್ಚರಿಕೆ, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಧಾರ್ಮಿಕ ದತ್ತಿ ಇಲಾಖೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ತಹಶಿಲ್ದಾರ್‌ಗಳು, ಧಾರ್ಮಿಕ ದತ್ತಿ ಇಲಾಖೆಯ ಪ್ರಾಧಿಕಾರಗಳ ಕಾರ್ಯದರ್ಶಿಗಳು, ಎಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ಆಯುಕ್ತರು, ಮುಜರಾಯಿ ತಹಶಿಲ್ದಾರ್, ಅನುವಂಶಿಕ ಮೋಕೇಸರರು, ಆಡಳಿತಾಧಿಕಾರಿಗಳು ಮತ್ತು ಇತರೆ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದೆ.

## ತಡವಾಗಿ ಕಚೇರಿಗೆ ಬರುವ ಸಿಬ್ಬಂದಿಗೆ ಬಿಸಿ ಮುಟ್ಟಿಸಿದ ಬೆಂಗಳೂರು ಗ್ರಾಮಾಂತರ ಡಿಸಿ

• ಉದಯವಾಹಿನಿ, ಬೆಂಗಳೂರು

ಕಚೇರಿಗೆ ತಡವಾಗಿ ಬರುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬಿಸಿ ಮುಟ್ಟಿಸಲು ಮುಂದಾದ ಜಿಲ್ಲಾಧಿಕಾರಿ ಡಾ.ಅನುರಾಧ.ಕೆ.ಎನ್ ಅವರು ರಿಯಾಲಿಟಿ ಚೆಕ್ ನಡೆಸಿದ್ದಾರೆ. ಜಿಲ್ಲಾಡಳಿತ ಭವನದಲ್ಲಿನ ಕಚೇರಿಗಳಿಗೆ ಭೇಟಿ ನೀಡಿದ ಅವರು, ಅಧಿಕಾರಿಗಳ ಹಾಜರಾತಿ ಪರಿಶೀಲಿಸಿದರು. ಸೋಮವಾರ ಎಂದಿನಂತೆ ಅಧಿಕಾರಿಗಳು ಕಚೇರಿಗಳಿಗೆ ಬರುತ್ತಿದ್ದರು. ಅಷ್ಟರಲ್ಲೇ ಡಾ.ಕೆ.ಎನ್ ಅನುರಾಧ ಅವರು ಜಿಲ್ಲಾಡಳಿತ ಭವನದಲ್ಲಿನ ಹಲವು ಇಲಾಖೆಗಳ ಕಚೇರಿಗೆ ಖುದ್ದು ಭೇಟಿ ನೀಡಿ ಅಧಿಕಾರಿಗಳ ಹಾಜರಾತಿಯ ರಿಯಾಲಿಟಿ ಚೆಕ್ ನಡೆಸಿದ್ದಾರೆ.

ಜಿಲ್ಲಾಡಳಿತ ಭವನದಲ್ಲಿರುವ ಕಂದಾಯ ಇಲಾಖೆ, ಭೂ ದಾಖಲೆಗಳ ಇಲಾಖೆ, ಆರೋಗ್ಯ ಇಲಾಖೆ, ಕೃಷಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸೇರಿದಂತೆ ಹಲವು ಇಲಾಖೆಗಳ ಕಚೇರಿಗಳಿಗೆ ಅವರು ಭೇಟಿ ನೀಡಿದರು.

ಸರ್ಕಾರ ಎಲ್ಲಾ ಸರ್ಕಾರಿ ನೌಕರರಿಗೆ ಆನ್‌ಲೈನ್ ಮೂಲಕ ಡಿಜಿಟಲ್ ಹಾಜರಾತಿ ಕಡ್ಡಾಯಗೊಳಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಕರ್ತವ್ಯ ಆಯಪ್ ಬಿಡುಗಡೆಗೊಳಿಸಿದೆ. ಬೆಳಗ್ಗೆ 10 ಗಂಟೆಗೆ ಅಧಿಕಾರಿಗಳು ಲಾಗಿನ್ ಆಗಬೇಕು, ಸಂಜೆ 5:30 ಗಂಟೆಗೆ ಲಾಗ್ ಔಟ್ ಆಗಬೇಕು ಎಂದು ತಿಳಿಸಲಾಗಿದೆ.

ಅಧಿಕಾರಿಗಳ ಕರ್ತವ್ಯದ ಬಗೆಗಿನ ರಿಯಾಲಿಟಿ ಚೆಕ್ ಮಾಡಲು ಡಿಸಿ, ಬೆಳಗ್ಗೆ 10:30ರಿಂದ 11 ರ ಸಮಯದಲ್ಲಿ ಭೇಟಿ ನೀಡಿ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಬಂದು ಕುರ್ಚಿಯಲ್ಲಿ ಕುಳಿತಿದ್ದಾರೆಯೇ?, ಹಲವು ಕಚೇರಿಗಳಲ್ಲಿ ಕುರ್ಚಿಗಳು ಖಾಲಿ ಇರುವುದನ್ನು ಗಮನಿಸಿದ ಡಿಸಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದು, ಸೂಕ್ತ ಕಾರಣ ನೀಡುವಂತೆ ಸೂಚಿಸಿದ್ದಾರೆ.

## ತಿಂಗಳಾಂತ್ಯದವರೆಗೂ ಮಳೆ ಕೊರತೆಯಾದರೆ ಬರ ಪೀಡಿತ ತಾಲ್ಲೂಕುಗಳ ಘೋಷಣೆ : ಸಚಿವ ಯತೀಂದ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮಳೆಯ ಕೊರತೆ ಈ ತಿಂಗಳಾಂತ್ಯದವರೆಗೂ ಮುಂದುವರೆದರೆ, ಕೇಂದ್ರ ಸರ್ಕಾರದ ಮಾನದಂಡಗಳ ಆಧಾರದ ಮೇಲೆ ಬರ ಪೀಡಿತ ತಾಲ್ಲೂಕುಗಳ ಘೋಷಣೆ ಸಾಧ್ಯವಾಗಲಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಳೆ ಕೊರತೆಯ ಬಗ್ಗೆ ಕೇಂದ್ರ ಸರ್ಕಾರ ನಿರ್ದಿಷ್ಟವಾದ ನಿಯಮಗಳನ್ನು ರೂಪಿಸಿದೆ. ಯಾವ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ, ಮಳೆ ಕೊರತೆಯ ಪ್ರಮಾಣವೆಷ್ಟು ಎಂಬೆಲ್ಲಾ ಅಂಶಗಳನ್ನು ಪರಿಶೀಲಿಸಿ ಬಳಿಕ ಬರ ಪೀಡಿತ ತಾಲ್ಲೂಕುಗಳ ಘೋಷಣೆ ಮಾಡಬೇಕು ಎಂದರು. ಈ ತಿಂಗಳಾಂತ್ಯದವರೆಗೂ ಮಳೆ ಕೊರತೆಯ ಅಭಾವ ಮುಂದುವರೆದರೆ, ಕೇಂದ್ರ ಸರ್ಕಾರದ ಮಾನದಂಡಗಳು ಪೂರ್ಣಗೊಂಡಂತಾಗುತ್ತವೆ. ರಾಜ್ಯ ಸರ್ಕಾರ ಬರ ಪೀಡಿತ ತಾಲ್ಲೂಕುಗಳ ಘೋಷಣೆಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಿದೆ ಎಂದು ಹೇಳಿದರು.

ಬಿಡದಿ ಟೌನ್‌ಶಿಪ್ ಯೋಜನೆಗೆ ಭೂಮಿ ನೀಡುವ ವಿಚಾರ ದಿನದಿಂದ ದಿನಕ್ಕೆ ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಯೋಜನೆಗೆ ಭೂಮಿ ನೀಡುವಂತೆ ರೈತರನ್ನು ಮನವೊಲಿಸುವ ಪ್ರಯತ್ನಗಳು ನಡೆಯುತ್ತಿವೆ. ಅದರೆ ಅಧಿಕಾರಿಗಳು, ರಾಜಕಾರಣಿಗಳ ಮನವೊಲಿಕೆಗೆ ರೈತರು ಒಪ್ಪುತ್ತಿಲ್ಲ. ಯಾವುದೇ ಕಾರಣಕ್ಕೂ ನಾವು ಜಮೀನನ್ನು ನೀಡುವುದಿಲ್ಲ ಎಂದು ಅವರು ಪಟ್ಟು ಹಿಡಿದಿದ್ದಾರೆ. ಹೀಗಾಗಿ ಸರ್ಕಾರ ಇಕ್ಕಟ್ಟಿಗೆ ಸಿಲುಕಿದೆ. ಯೋಜನೆಯನ್ನು ಜಾರಿಗೊಳಿಸುತ್ತೇವೆ ಎಂದು ಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ. ಅದರೆ, ರೈತರ ವಿರೋಧ ತೀವ್ರಗೊಳ್ಳುತ್ತಲೇ ಇದೆ.

# ಬಿಡದಿ ಕಗ್ಗಂಟು ಅಧಿಕಾರಿಗಳಿಗೆ ಪೊರಕೆ ಏಟು!

### ಇಕ್ಕಟ್ಟಿನಲ್ಲಿ ಸರ್ಕಾರ



ಬಿಡದಿ ಟೌನ್‌ಶಿಪ್ ಯೋಜನೆಯ ಪರ ಹಾಗೂ ವಿರುದ್ಧ ಅಭಿಪ್ರಾಯಗಳು ಕೇಳಿಬರುತ್ತಿದೆ. ಎರಡು ಗುಂಪುಗಳು ಭೂಮಿ ನೀಡುವ ವಿಚಾರವಾಗಿ ಹೋರಾಟ ನಡೆಸುತ್ತಿದೆ. ಫಲವತ್ತಾದ ಭೂಮಿಯನ್ನು ಯಾವುದೇ ಕಾರಣಕ್ಕೂ ನೀಡುವುದಿಲ್ಲ ಎಂಬ ವಾದವನ್ನು ರೈತರು ಮಾಡುತ್ತಿದ್ದಾರೆ. ಆದರೆ, ಯೋಜನೆ ಮಾಡಿಯೇ ಸಿದ್ದ ಎಂದು ಸರ್ಕಾರ ಹೇಳುತ್ತಿದೆ. ಈಗಾಗಲೇ ಇದು ರಾಜಕೀಯ ತಿರುವು ಪಡೆದುಕೊಂಡಿದೆ. ಎಚ್ ಡಿ ಕುಮಾರಸ್ವಾಮಿ ಅವರು ನೇರವಾಗಿ ಅಖಾಡಕ್ಕಿಳಿದಿದ್ದಾರೆ. ಬಿಡದಿಯಲ್ಲಿ ಈಗಾಗಲೇ ರೈತರ ಹೋರಾಟದ ಜೊತೆಗೆ ಅವರು ಸೇರಿಕೊಂಡು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಬಿಡದಿಗೆ ಬಂದು ರೈತರ ಜೊತೆಗೆ ಚರ್ಚೆ ನಡೆಸಿ ಎಂದು ಸಿಎಂ ಡಿಕೆ ಶಿವಕುಮಾರ್ ಅವರಿಗೆ ಆಹ್ವಾನ ನೀಡಿದ್ದರು. ಆದರೆ ಡಿಕೆಶಿ ಹೋಗಿರಲಿಲ್ಲ.

ಮತ್ತೊಂದು ಕಡೆಯಲ್ಲಿ ರೈತರು ನಡೆಸುತ್ತಿರುವ ಹೋರಾಟ ಮುಂದುವರಿದಿದೆ. ಫಲವತ್ತಾದ ಭೂಮಿಯನ್ನು ನೀಡಲು ಸಾಧ್ಯವಿಲ್ಲ ಎಂದು ಹಠಕ್ಕೆ ರೈತರು ಬಿದ್ದಿದ್ದಾರೆ. ಅವರನ್ನು ಮನವೋಲಿಸುವ ಪ್ರಯತ್ನಗಳು ನಡೆದರೂ ಯಾವುದೂ ಸಫಲವಾಗಿಲ್ಲ. ಇದು ಸರ್ಕಾರಕ್ಕೆ ತಲೆನೋವನ್ನು ಉಂಟು ಮಾಡಿದೆ.

- ಬಿಡದಿ ಟೌನ್‌ಶಿಪ್ ಯೋಜನೆ ಸರ್ವೇಗೆ ರೈತರ ವಿರೋಧ
- ಅಧಿಕಾರಿಗಳ ವಿರುದ್ಧ ಪೊರಕೆ ಪ್ರದರ್ಶನ,
- ಎರಡು ಕಾರುಗಳ ಗಾಜು ಪುಡಿ
- ಜೆಎಂಸಿ ಸರ್ವೆಗೆ ಬಂದ ಅಧಿಕಾರಿಗಳಿಗೆ ಪೊರಕೆಯಿಂದ ಹೊಡೆದ ಮಹಿಳೆಯರು



• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕರು ಹಾಗೂ ರೈತರ ವಿರೋಧದ ಮಧ್ಯೆ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ತಾಲ್ಲೂಕಿನ ಬಿಡದಿ ಟೌನ್‌ಶಿಪ್ ಯೋಜನೆಯ ಸರ್ವೇ ಕಾರ್ಯಕ್ಕೆ ಮುಂದಾಗಿದ್ದ ಅಧಿಕಾರಿಗಳ ವಿರುದ್ಧ ರೈತ ಮಹಿಳೆಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ವೇ ಕಾರ್ಯಕ್ಕೆ ಆಕ್ಷೇಪಿಸಿ, ಪೊರಕೆ ಪ್ರದರ್ಶನ ಮಾಡಿದ್ದು, ಎರಡು ಕಾರಿನ ಗಾಜುಗಳನ್ನು ಪುಡಿಗೈದಿದ್ದಾರೆ.

ಸೋಮವಾರ ಬೆಳಗ್ಗೆ ಯೋಜನೆ ವ್ಯಾಪ್ತಿಯಲ್ಲಿನ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ತಾಲ್ಲೂಕಿನ ಮಂಡಲಹಳ್ಳಿ ಗ್ರಾಮಕ್ಕೆ ಸರ್ವೇ ಮಾಡಲು ಅಧಿಕಾರಿಗಳು ತೆರಳಿದ್ದು, 'ಟೌನ್‌ಶಿಪ್ ಯೋಜನೆಗೆ ಯಾವುದೇ ಕಾರಣಕ್ಕೆ ಅವಕಾಶ ನೀಡುವುದಿಲ್ಲ. ಸರ್ವೇ ಮಾಡಲು ಬಿಡುವುದಿಲ್ಲ' ಎಂದು ರೈತ ಮಹಿಳೆಯರು ಎಚ್ಚರಿಕೆ ನೀಡಿದ್ದಾರೆ.

ವಿರೋಧದ ನಡುವೆಯೂ ಸರ್ವೇಗೆ ಬಂದಿದ್ದ ಅಧಿಕಾರಿಗಳಿಗೆ ಮಹಿಳೆಯರು ಪೊರಕೆ ಸೇವ ಮಾಡಿದ್ದಾರೆ. ಅಲ್ಲದೆ, ಕಲ್ಲು ಇಟ್ಟಿಗೆಗಳಿಂದ ಅಧಿಕಾರಿಗಳಿದ್ದ ಎರಡು ಕಾರುಗಳ ಗಾಜುಗಳನ್ನು ಪುಡಿ ಮಾಡಿದ್ದಾರೆ. 'ಯಾವುದೇ ಕಾರಣಕ್ಕೂ ಸರ್ವೇ ಕಾರ್ಯ ನಡೆಸಬಾರದು' ಎಂದು ಪಟ್ಟುಹಿಡಿಯಲಾಗಿದ್ದು, ಈ ವೇಳೆ ರೈತ ಮುಖಂಡರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆದಿದೆ. ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ ಪೊಲೀಸರು, ಅಧಿಕಾರಿಗಳನ್ನು ತಮ್ಮ ಭದ್ರತೆಯಲ್ಲಿ ಅಲ್ಲಿಂದ ಸುರಕ್ಷಿತವಾಗಿ ಕಳುಹಿಸಿಕೊಟ್ಟಿದ್ದಾರೆ. ಸದ್ಯ ಕೆಲವು ರೈತರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಮಂಡಲಹಳ್ಳಿ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.


'ಸರಕಾರ ಪೊಲೀಸರ ಬಲಪ್ರಯೋಗ ಹಾಗೂ ದಬ್ಬಾಳಿಕೆ ಮೂಲಕ ರೈತರನ್ನು ಒಕ್ಕಲೆಬ್ಬಿಸುತ್ತಿರುವುದು ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಜೆಡಿಎಸ್ ಮೊದಲಿನಿಂದಲೂ ರೈತರ ಹಿತರಕ್ಷಣೆಗೇ ಬದ್ಧವಾಗಿದೆ. ರೈತರ ಒಪ್ಪಿಗೆಯಿಲ್ಲದೆ, ಅವರ ಆಕ್ಷೇಪಣೆಗಳನ್ನು ಪರಿಗಣಿಸದೆ ಬಿಡದಿಯಲ್ಲಿ ರೈತರ ಒಂದಿಂಚು ಭೂಮಿಯನ್ನೂ ಮುಟ್ಟಲು ಬಿಡುವುದಿಲ್ಲ.

ಕೂಡಲೇ ಈ ಸರ್ವೆ, ಭೂಸ್ವಾಧೀನ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು ಮತ್ತು ಬಿಡದಿ ಟೌನ್‌ಶಿಪ್ ಯೋಜನೆಯನ್ನು ಕೈಬಿಡಬೇಕು. ಇಲ್ಲದಿದ್ದರೆ ಜೆಡಿಎಸ್ ಪಕ್ಷವು ರೈತರ ಪರವಾಗಿ ಬೀದಿಗಿಳಿದು ಹೋರಾಟ ನಡೆಸಲಿದೆ' ಎಂದು ಜೆಡಿಎಸ್ ಎಚ್ಚರಿಕೆ ನೀಡಿದೆ.




**ಪರ-ವಿರೋಧ**

ಈ ಮಧ್ಯೆ, ಬಿಡದಿ ಟೌನ್‌ಶಿಪ್ ಯೋಜನೆ ಪರ-ವಿರೋಧದ ಎರಡೂ ಗುಂಪುಗಳು ಮುಖಾಮುಖಿಯಾಗಿದ್ದು, ಈ ವೇಳೆ ಹೈ ಡ್ರಾಮ ನಡೆದಿತ್ತು. ಟೌನ್‌ಶಿಪ್ ಯೋಜನೆ ವಿರೋಧಿ ಪ್ರತಿಭಟನೆಗೆ ಆಗಮಿಸಿದ್ದ ರೈತರ ಬಸ್, ಕಾರುಗಳನ್ನು ಯೋಜನೆ ಪರ ಇರುವ ರೈತರು ತಡೆದು ಆಕ್ರೋಶ ವ್ಯಕ್ತಪಡಿಸಿದ್ದರು. ಇದರಿಂದ ಕೆಲಕಾಲ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.



### ಪೊರಕೆ ಏಟು ನೀಡಿದ ರೈತ ಮಹಿಳೆಯರು

ಮಾತಿಗೆ ಮಾತು ಬೆಳೆದು ಸರ್ವೇಗೆ ಬಂದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ರೈತ ಮಹಿಳೆಯರು ಪೊರಕೆಯಲ್ಲಿ ಹೊಡೆದಿದ್ದಾರೆ. ಕೂಡಲೇ ಪೊಲೀಸರು ರಕ್ಷಣೆ ನೀಡಿದ್ದು, ಆದರೂ ಕೆಲ ಸಿಬ್ಬಂದಿಗೆ ಪೊರಕೆ ಏಟು ಬಿದ್ದಿದೆ. ಘಟನೆಯಲ್ಲಿ ಸರ್ವೇಗೆ ಬಂದಿದ್ದ ಕಾರು ಜಖಂ ಆಗಿದೆ. ತಳ್ಳಾಟ ನೂಕಾಟದಲ್ಲಿ ಕೆಲವರಿಗೆ ಪೆಟ್ಟು ಬಿದ್ದಿದೆ. ಘಟನೆಯಿಂದ ಕೆಲ ರೈತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇನ್ನು ಪೊಲೀಸರ ನಡೆಗೆ ರೈತರ ಆಕ್ರೋಶ ವ್ಯಕ್ತವಾಗಿದೆ.

### ಸರ್ಕಾರದ ಚಿತಾವಣೆಯಿಂದ ಬಿಡದಿ ಟೌನ್‌ಶಿಪ್‌ಗೆ ಸರ್ವೆ: ಹೆಚ್‌ಡಿಕೆ



ಸರ್ಕಾರದ ಚಿತಾವಣೆಯಿಂದ ಬಿಡದಿ ಟೌನ್‌ಶಿಪ್‌ಗೆ ಸರ್ವೆ ಕಾರ್ಯ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಆರೋಪ ಮಾಡಿದ್ದಾರೆ. ಬಿಡದಿಯಲ್ಲಿ ರೈತರ ಮೇಲೆ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದಿಂದ ಕುಮಾರಸ್ವಾಮಿ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. 500 ದಿನಗಳಿಂದ ಬಿಡದಿಯಲ್ಲಿ ರೈತರು ಶಾಂತಿಯುತವಾಗಿ ಹೋರಾಟ ಮಾಡುತ್ತಿದ್ದರು. ಏಕಾಏಕಿಯಾಗಿ ಅಧಿಕಾರಿಗಳು ಸರ್ವೆ ಮಾಡಲು ಬಂದಿದ್ದರು. ಈ ವೇಳೆ ಅಹಿತಕರ ಘಟನೆಗಳು ನಡೆದಿವೆ. ಇದಕ್ಕೆ ಸರ್ಕಾರದ ಚಿತಾವಣೆ ಕಾರಣ ಎಂದು ಆರೋಪಿಸಿದರು. ಕೆಟ್ಟ ಘಟನೆಗಳಿಗೆ ಅವಕಾಶ ಕೊಡಬೇಡಿ ಎಂದು ರೈತರಿಗೆ ಮನವಿ ಮಾಡುತ್ತೇನೆ. ಶಾಂತಿಯುತ ಹೋರಾಟ ಮುಂದುವರೆಸಿ. ಕಾನೂನು ಪರವಾಗಿ ನಿಮ್ಮ ಪರ ಹೋರಾಟ ಮಾಡೋಕೆ ಅನೇಕ ಜನ ನಿಮ್ಮ ಪರ ಇದ್ದಾರೆ. ನಿಮ್ಮ ಹೋರಾಟದಲ್ಲಿ ಸರ್ಕಾರದ ದೌರ್ಜನ್ಯ, ದುರ್ಬಳಕೆಗೆ ನಿಮ್ಮ ಹೋರಾಟದಲ್ಲಿ ವಿರೋಧ ಆಗಬಾರದು ಎಂದು ಸಲಹೆ ಕೊಟ್ಟರು. ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಶಾಂತಿಯುತವಾಗಿ ಮಾಡುತ್ತಿರುವ ಹೋರಾಟಕ್ಕೆ ಸರ್ಕಾರ ತಮ್ಮನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ. ಪೊಲೀಸರು ಸರ್ಕಾರದ ಸೂಚನೆಗೆ ಹೆದರಿ ರೈತ ವಿರೋಧಿ ನೀತಿ ಮಾಡಬೇಡಿ. ಒಂದು ವೇಳೆ ಹಾಗೆ ಮಾಡಿದ್ರೆ, ಸರ್ಕಾರದ ಕೆಟ್ಟ ನಡವಳಿಯ ಪಾಲು ನಿಮಗೂ ಹಂಚಿಕೊಳ್ಳೋ ದಿನ ಬರುತ್ತದೆ. ಹೀಗಾಗಿ ಪೊಲೀಸರು ಎಚ್ಚರಿಕೆಯಿಂದ ಇರಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

**ರೈತರನ್ನು ಬಿಡುಗಡೆ ಮಾಡಿ**

ಬಿಡದಿ ಟೌನ್‌ಶಿಪ್ ವಿಷಯವಾಗಿ ಸರಕಾರ ರೈತರ ಒಪ್ಪಿಗೆ ಇಲ್ಲದೇ, ಯಾವುದೇ ರೀತಿಯ ಮಾಹಿತಿ ನೀಡದೆ ಸರ್ವೇ ಮಾಡಲು ಹೊರಟಿರುವುದನ್ನು ತೀವ್ರವಾಗಿ ಖಂಡಿಸುತ್ತೇನೆ. ರೈತರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ವಿಫಲವಾಗಿರುವ ಸರಕಾರ, ಏನಾದರೂ ಮಾಡಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಹೊರಟಿರುವುದು ದುರ್ದೈವದ ಸಂಗತಿ. ಈ ಕೂಡಲೇ ಸರಕಾರ ವಶಕ್ಕೆ ಪಡೆದಿರುವ ರೈತರನ್ನು ಬಿಡುಗಡೆ ಮಾಡಬೇಕು ಹಾಗೂ ಬಿಡದಿ ಟೌನ್‌ಶಿಪ್ ಯೋಜನೆಯನ್ನು ಕೈಬಿಡಬೇಕು. - ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ

### ಭೂಬಿಟ್ಟು ಜೆಎಂಸಿ ಸರ್ವೇ

ಟೌನ್ ಶಿಪ್ ಭೂಸ್ವಾಧೀನ ವಿರೋಧಿಸಿ ಬಿಡದಿಯ ರೈತರು ನಮ್ಮ ಭೂಮಿ, ನಮ್ಮ ಹಕ್ಕು ಎಂದು ಕಳೆದ 485 ದಿನಗಳಿಂದಲೂ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಏಕಾಏಕಿ ಅಧಿಕಾರಿಗಳನ್ನು ಛೂಬಿಟ್ಟು ಜೆಎಂಸಿ ಸರ್ವೆಗೆ ಮುಂದಾಗಿರುವುದು ಅಕ್ಷಮ್ಯ. ರಾಜ್ಯ ಸರ್ಕಾರದ ಈ ರೈತ ವಿರೋಧಿ ನಡೆಯನ್ನು ಜೆಡಿಎಸ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ. ಡಿಕೆ ಶಿವಕುಮಾರ್ ಸರ್ಕಾರ ಪೊಲೀಸರ ಬಲಪ್ರಯೋಗ ಹಾಗೂ ದಬ್ಬಾಳಿಕೆ ಮೂಲಕ ರೈತರನ್ನು ಒಕ್ಕಲೆಬ್ಬಿಸುತ್ತಿರುವುದು ಪ್ರಜಾಪ್ರಭುತ್ವ ವಿರೋಧಿಯಾಗಿದೆ ಎಂದಿದೆ.

## ರಾಮ ಮಂದಿರಕ್ಕೆ ಪ್ರಥಮ ಸಿಇಒ ನೇಮಕಕ್ಕೆ ಅರ್ಜಿ ಆಹ್ವಾನ: ಜುಲೈ 18 ಕೊನೆ ದಿನ


• ಉದಯವಾಹಿನಿ, ಬೆಂಗಳೂರು

ಶತಮಾನಗಳ ಹೋರಾಟದ ನಂತರ ನಿರ್ಮಾಣವಾದ ರಾಮ ಮಂದಿರದಲ್ಲಿ ಭಕ್ತರು ನೀಡಿದ ಕಾಣಿಕೆಯನ್ನು ಕಳ್ಳತನ ಮಾಡಿದ ಆರೋಪದ ಪ್ರಕರಣ ದೇಶದಲ್ಲಿ ಭಾರಿ ಸಂಚಲನ ಸೃಷ್ಟಿಸಿದೆ. ರಾಜ್ಯ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಈ ಕುರಿತು ತನಿಖೆ ತೀವ್ರಗೊಳಿಸಿದೆ. ಇದರ ನಡುವೆ, ರಾಮ ಮಂದಿರಕ್ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ನೇಮಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಮಂದಿರದ ಮೊದಲ ಸಿಇಒ ಹುದ್ದೆಗೆ ಸೋಮವಾರ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಜುಲೈ 18ರಂದು ಅಂತಿಮ ದಿನ ನಿಗದಿಪಡಿಸಲಾಗಿದೆ.ಈ ಕುರಿತು ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಟ್ರಸ್ಟ್, ನಿಗದಿತ ಕೊನೆ ದಿನಾಂಕದ ಸಂಜೆ 4ಗಂಟೆಯವರೆಗೂ ಅಭ್ಯರ್ಥಿಗಳು ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದು ಎಂದು ತಿಳಿಸಿದೆ. ದೇವಾಲಯದ ಕಾಣಿಕೆ ಹಣ ಮತ್ತು ಇತರ ಬೆಲೆ ಬಾಳುವ ವಸ್ತುಗಳ ದುರುಪಯೋಗದ ಆರೋಪಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಈ ಮಹತ್ವದ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ.

**ಸಿಇಒ ಭಕ್ತರ ನಂಬಿಕೆ ಕಾಪಾಡಲಿ:** ಈ ಕುರಿತಂತೆ ಮಾಧ್ಯಮಗಳ ಜೊತೆ ಮಾತನಾಡಿರುವ ರಾಮ ಮಂದಿರ ನಿರ್ಮಾಣ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ, ಮಂದಿರದ ಪ್ರಥಮ ಸಿಒಇ ಆಗಲಿರುವವರು ಅವರ ಅಧಿಕಾರ ಮತ್ತು ಕರ್ತವ್ಯಗಳನ್ನು ವ್ಯಾಖ್ಯಾನಿಸುವ ಸಂಪೂರ್ಣ ಹಕ್ಕು ಕೇವಲ ಟ್ರಸ್ಟ್‌ಗೆ ಮಾತ್ರ ಇರುತ್ತದೆ.

ಟ್ರಸ್ಟ್ ಮೇಲೆ ಭಕ್ತರು ಇಟ್ಟಿರುವ ನಂಬಿಕೆಯನ್ನು ಕಾಪಾಡುವುದರ ಜೊತೆಗೆ ದೇವಾಲಯ ಆಡಳಿತವನ್ನು ಪಾರದರ್ಶಕವಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿ ಅವರ ಮೇಲಿರುತ್ತದೆ ಎಂದು ಹೇಳಿದ್ದಾರೆ.



**ಸಿಇಒ ನೇಮಕಕ್ಕೆ ಸಮಿತಿ ರಚನೆ:** ಸಿಇಒ ಹುದ್ದೆಗೆ ಬರುವ ಅರ್ಜಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅದಕ್ಕೆ ಸೂಕ್ತ ಅಭ್ಯರ್ಥಿಗಳನ್ನು ಶಿಫಾರಸು ಮಾಡಲು ಮೂವರು ಸದಸ್ಯರ ಉನ್ನತ ಮಟ್ಟದ ಸಮಿತಿಯನ್ನು ಟ್ರಸ್ಟ್ ಈ ತಿಂಗಳ ಆರಂಭದಲ್ಲಿ ರಚಿಸಿದೆ. ಈ ಸಮಿತಿಯಲ್ಲಿ ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಪ್ರಮೋದ್ ಕೊಹ್ಲಿ, ನಿವೃತ್ತ ಲೆಫ್ಟಿನೆಂಟ್ ಜನರಲ್ ವಿಷ್ಣುಕಾಂತ್ ಚತುರ್ವೇದಿ ಮತ್ತು ಎನ್‌ಐಟಿ ರಾಯ್‌ಪುರದ ಮಾಜಿ ಅಧ್ಯಕ್ಷ ಸುರೇಶ್ ಹವಾರೆ ಇದ್ದಾರೆ.


ನಾನು ಈ ಆಯ್ಕೆ ಸಮಿತಿಯ ಭಾಗವಾಗಿಲ್ಲ ಎಂದು ಮಿಶ್ರಾ ಅವರು ಸ್ಪಷ್ಟಪಡಿಸಿದರು.

ಜುಲೈ 22ರಂದು ನಡೆಯಲಿರುವ ಟ್ರಸ್ಟ್‌ನ ಸಭೆಯ ಕಾರ್ಯಸೂಚಿಯನ್ನು ಗಮನಿಸಿದ ಬಳಿಕವಷ್ಟೇ ಅದರಲ್ಲಿ ಭಾಗವಹಿಸುವ ಬಗ್ಗೆ ನಿರ್ಧರಿಸುವೆ. ದೇವಾಲಯದ ನಿರ್ಮಾಣ ಸಮಿತಿಯ ಸದಸ್ಯರು ಟ್ರಸ್ಟ್‌ನಲ್ಲಿ ಯಾವುದೇ ಮತದಾನದ ಹಕ್ಕನ್ನು ಹೊಂದಿರದ ಪದನಿಮಿತ್ತ ಸದಸ್ಯರಾಗಿದ್ದಾರೆ ಎಂದು ಅವರು ಪುನರುಚ್ಚರಿಸಿದರು.

## ನಗರದ ಸಂಚಾರ ವ್ಯವಸ್ಥೆ ವಿಶ್ವಮಟ್ಟಕ್ಕೆ ಕೊಂಡೊಯ್ಯಲು ತಂತ್ರಜ್ಞಾನ ಆಧಾರಿತ ಕ್ರಮಗಳಿಗೆ ಆದ್ಯತೆ: ಗೃಹ ಸಚಿವ ಪ್ರಿಯಾಂಕ್ ಖರ್ಗೆ

• ಉದಯವಾಹಿನಿ, ಬೆಂಗಳೂರು

ನಗರದ ಸಂಚಾರ ದಟ್ಟಣೆ ಸಮಸ್ಯೆ ಪರಿಣಾಮಕಾರಿಯಾಗಿ ನಿಯಂತ್ರಿಸಿ, ಸಾರ್ವಜನಿಕರಿಗೆ ಸುಗಮ ಹಾಗೂ ಸುರಕ್ಷಿತ ಸಂಚಾರ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ತಂತ್ರಜ್ಞಾನ ಆಧಾರಿತ ಪರಿಹಾರಗಳಿಗೆ ಹೆಚ್ಚಿನ ಒತ್ತು ನೀಡುವಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದ್ದಾರೆ.



ಬೆಂಗಳೂರು ನಗರದ ಟ್ರಾಫಿಕ್ ಡಿಸಿಪಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಗರದ ವಿವಿಧ ಭಾಗಗಳಲ್ಲಿ ವಾಹನಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಪ್ರಮುಖ ಜಂಕ್ಷನ್‌ಗಳು ಹಾಗೂ ಹೆಚ್ಚು ವಾಹನಗಳು ಸಂಚರಿಸುವ ರಸ್ತೆಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ವೈಜ್ಞಾನಿಕ ಮತ್ತು ತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ ಎಂದು ಹೇಳಿದ್ದಾರೆ.

ಬೆಂಗಳೂರು ಇಂದು ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಸ್ಥಾನವನ್ನು ಗಳಿಸಿದೆ. ವಿಶ್ವದ ಪ್ರಮುಖ ಐಟಿ ಕಂಪನಿಗಳು, ಬಹುರಾಷ್ಟ್ರೀಯ ಸಂಸ್ಥೆಗಳು ಹಾಗೂ ಹೂಡಿಕೆದಾರರು ಬೆಂಗಳೂರನ್ನು ತಮ್ಮ ವ್ಯವಹಾರ ಮತ್ತು ಹೂಡಿಕೆಯ ಕೇಂದ್ರವಾಗಿ ಆಯ್ಕೆ ಮಾಡುತ್ತಿದ್ದಾರೆ.

ಇಂತಹ ಜಾಗತಿಕ ನಗರಕ್ಕೆ ತಕ್ಕಂತೆ ವಿಶ್ವಮಟ್ಟದ ಸಂಚಾರ ನಿರ್ವಹಣಾ ವ್ಯವಸ್ಥೆಯನ್ನು ರೂಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದಿದ್ದಾರೆ.

ಸಂಚಾರ ದಟ್ಟಣೆ ಹೆಚ್ಚಿರುವ ರಸ್ತೆಗಳಲ್ಲಿ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ , ಕೃತಕ ಬುದ್ಧಿಮತ್ತೆ, ಸ್ಮಾರ್ಟ್ ಸಿಗ್ನಲ್ ವ್ಯವಸ್ಥೆ, ರಿಯಲ್-ಟೈಮ್ ಟ್ರಾಫಿಕ್ ಮಾನಿಟರಿಂಗ್ ಹಾಗೂ ಡೇಟಾ ಆಧಾರಿತ ಸಂಚಾರ ನಿರ್ವಹಣಾ ಕ್ರಮಗಳನ್ನು ಇನ್ನಷ್ಟು ವ್ಯಾಪಕವಾಗಿ ಅಳವಡಿಸಿಕೊಳ್ಳುವ ಕುರಿತು ಅಧಿಕಾರಿಗಳು ಕಾರ್ಯಯೋಜನೆ ರೂಪಿಸಬೇಕು ಎಂದು ಸಚಿವರು ನಿರ್ದೇಶಿಸಿದ್ದಾರೆ.

ಅಪಘಾತಗಳಿಗೆ ಕಾರಣವಾಗುವ ಹಾಟ್ ಸ್ಪಾಟ್ ಗುರುತಿಸುವಿಕೆ, ಸಂಚಾರ ನಿಯಮಗಳ ಕಟ್ಟುನಿಟ್ಟಿನ ಜಾರಿ, ತುರ್ತು ಸೇವಾ ವಾಹನಗಳಿಗೆ ಆದ್ಯತೆ, ಪಾದಚಾರಿಗಳ ಸುರಕ್ಷತೆ ಹಾಗೂ ಸಾರ್ವಜನಿಕರ ಅನುಕೂಲಕ್ಕೆ ಆದ್ಯತೆ ನೀಡುವ ರೀತಿಯಲ್ಲಿ ಸಂಚಾರ ವ್ಯವಸ್ಥೆಯನ್ನು ರೂಪಿಸಬೇಕು.

ಸಂಚಾರ ಸಮಸ್ಯೆ ಕೇವಲ ಪೊಲೀಸ್ ಇಲಾಖೆಯ ಜವಾಬ್ದಾರಿ ಮಾತ್ರವಲ್ಲ. ಬಿಬಿಎಂಪಿ, ಬಿಎಂಆರ್‌ಸಿಎಲ್, ಬಿಎಂಟಿಸಿ, ನಗರಾಭಿವೃದ್ಧಿ ಇಲಾಖೆ ಹಾಗೂ ಇತರೆ ಸಂಬಂಧಿತ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ದೀರ್ಘಕಾಲೀನ ಪರಿಹಾರಗಳನ್ನು ಜಾರಿಗೊಳಿಸಬೇಕು ಎಂದು ಸಚಿವರು ಹೇಳಿದ್ದಾರೆ.

ಸಭೆಯಲ್ಲಿ ಪ್ರತಿಯೊಂದು ಸಂಚಾರ ವಿಭಾಗದ ಡಿಸಿಪಿಗಳು ತಮ್ಮ ವ್ಯಾಪ್ತಿಯ ಸಂಚಾರ ಪರಿಸ್ಥಿತಿ, ದಟ್ಟಣೆ ಉಂಟಾಗುವ ಪ್ರಮುಖ ಸ್ಥಳಗಳು, ಕೈಗೊಂಡಿರುವ ಕ್ರಮಗಳು ಹಾಗೂ ಮುಂದಿನ ಕಾರ್ಯಯೋಜನೆ ಕುರಿತು ಸಚಿವರಿಗೆ ವಿವರಿಸಿದರು. ಸಂಚಾರ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸುವ ಸಂಬಂಧ ವಿವಿಧ ಸಲಹೆಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

## ರಾಜ್ಯ ಮುಂಗಾರು ಅಧಿವೇಶನಕ್ಕೆ ಮುಹೂರ್ತ ನಿಗದಿ; ಆಗಸ್ಟ್ 6ರಿಂದ ಆರಂಭ

### ಕುಡಿಯುವ ನೀರನ್ನು ಪೂರೈಸಬೇಕು, ತಮಿಳುನಾಡು ಪಾಲಿನ ನೀರು ಹರಿಸುವ ಕೋರ್ಟ್ ಆದೇಶ

• ಉದಯವಾಹಿನಿ, ಬೆಂಗಳೂರು

ರಾಜ್ಯ ಮುಂಗಾರು ಅಧಿವೇಶನಕ್ಕೆ ಮುಹೂರ್ತ ನಿಗದಿಯಾಗಿದೆ. ಆಗಸ್ಟ್ 6ರಿಂದ ಮುಂಗಾರು ಅಧಿವೇಶನ ಆರಂಭವಾಗಲಿದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ತಿಳಿಸಿದ್ದಾರೆ. ಸಿಎಂ ಗೃಹ ಕಚೇರಿ ಕೃಷ್ಣಾ ಬಳಿ ಶಿವಕುಮಾರ್ ಅವರು ಮಾಧ್ಯಮಗಳ ಪ್ರಶ್ನೆಗಳಿಗೆ ಸೋಮವಾರ ಪ್ರತಿಕ್ರಿಯೆ ನೀಡಿದರು.''ಸಚಿವ ಸಂಪುಟ ಸಭೆ ಯಾವಾಗ, ದೆಹಲಿಗೆ ಹೋಗುವುದು ಯಾವಾಗ ಎಂದು ಕೇಳಿದಾಗ, ''ಆಗಸ್ಟ್ 6ರಿಂದ ಅಧಿವೇಶನ ಕರೆಯಲು ತೀರ್ಮಾನಿಸಲಾಗಿದೆ. ನಾನು ಒಂದು ದಿನ ಕೆಲಸದ ಮೇಲೆ ದೆಹಲಿಗೆ ಹೋಗಿ ಬರುತ್ತೇನೆ. ನಂತರ ನಮ್ಮ ನಾಯಕರು ಮೂರ್ನಾಲ್ಕು ದಿನಗಳಲ್ಲಿ ದಿನಾಂಕ ನಿಗದಿ ಮಾಡುತ್ತಾರೆ. ನಂತರ ನಾನು ದೆಹಲಿಗೆ ಹೋಗುವೆ'' ಎಂದು ಮಾಹಿತಿ ನೀಡಿದರು.

''ಕಾವೇರಿ ವಿಚಾರದಲ್ಲಿ ನಾವು ರೈತರನ್ನು ಬದುಕಿಸಬೇಕು. ಕುಡಿಯುವ ನೀರನ್ನು ಪೂರೈಸಬೇಕು, ತಮಿಳುನಾಡು ಪಾಲಿನ ನೀರು ಹರಿಸುವ ಕೋರ್ಟ್ ಆದೇಶವನ್ನು ಪಾಲನೆ ಮಾಡಬೇಕು. 15ರಂದು ಕಾವೇರಿ ಮಂಡಳಿ ಸಭೆ ನಡೆಯಲಿದೆ. ಆ ಸಭೆಯಲ್ಲಿ ನಮ್ಮ ರಾಜ್ಯದ ವಾದ ಮಂಡಿಸುತ್ತೇವೆ. ನಂತರ ತೀರ್ಮಾನವನ್ನು ತಿಳಿಸುತ್ತೇವೆ'' ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು. ಮಂಡ್ಯ ಶಾಸಕರು ಕಾವೇರಿ ನೀರು ಬಿಡುವಂತೆ ಮನವಿ ಮಾಡಿರುವ ಬಗ್ಗೆ ಕೇಳಿದಾಗ, ''ಮಂಡ್ಯದವರು, ಶ್ರೀರಂಗಪಟ್ಟಣದವರು, ಜಿಲ್ಲಾ ಸಚಿವರು ಬಂದು ಭೇಟಿ ಮಾಡಿದ್ದರು. ಸಭೆ ಬಳಿಕ ತೀರ್ಮಾನ ತಿಳಿಸುತ್ತೇವೆ'' ಎಂದು ಹೇಳಿದರು. ಕೆಪಿಎಸ್‌ಸಿ ಅಧ್ಯಕ್ಷರ ಅಮಾನತ್ತಿನ ಬಗ್ಗೆ ಕೇಳಿದಾಗ, ''ರಾಜ್ಯಪಾಲರು ಈ ಆದೇಶ ಮಾಡಿದ್ದಾರೆ. ಅವರ ನಂತರ ಯಾರು ಹಿರಿಯರು ಇದ್ದಾರೋ ಅವರಿಗೆ ಜವಾಬ್ದಾರಿ ನೀಡುವಂತೆ ನಿರ್ದೇಶನ ನೀಡಿದ್ದೇನೆ'' ಎಂದರು.




### ತಿರುಪತಿಯಲ್ಲಿ ಮೊದಲ ಆರತಿ ರಾಜ್ಯದ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ

ತಿರುಪತಿಯಲ್ಲಿ ಮೊದಲ ಆರತಿ ಕರ್ನಾಟಕ ರಾಜ್ಯದವರಿಗೆ ಎಂಬ ತೀರ್ಮಾನದ ಬಗ್ಗೆ ಕೇಳಿದಾಗ, ''ತಿರುಪತಿಯಲ್ಲಿ ಮಹಾರಾಜರ ಕಾಲದಿಂದಲೂ ಮೊದಲ ಆರತಿ ಕರ್ನಾಟಕದ್ದಾಗಿದೆ. ಅಲ್ಲಿ ಪ್ರತಿದಿನ ಅಧಿಕಾರಿಯೊಬ್ಬರು ಆರತಿ ಪಡೆಯುತ್ತಾರೆ. ಆ ಅಧಿಕಾರಿ ಬದಲಿಗೆ ಇಲ್ಲಿಂದ ದರ್ಶನಕ್ಕೆ ಹೋಗುವ ಜನಪ್ರತಿನಿಧಿಗಳು, ನ್ಯಾಯಾಧೀಶರು, ಅಧಿಕಾರಿಗಳಿಗೆ, ಸಂಸದರು, ಮೇಯರ್, ತಹಸೀಲ್ದಾರ್ ಸೇರಿ ನಮ್ಮ ರಾಜ್ಯದವರಿಗೆ ಅವಕಾಶ ನೀಡಲಾಗುವುದು. ಇದು ನಿರ್ದಿಷ್ಟ ಪಕ್ಷಕ್ಕೆ ಎಂದು ಸೀಮಿತವಲ್ಲ. ಯಾವುದೇ ಪಕ್ಷದ ಜನಪ್ರತಿನಿಧಿಗಳು ಹೋದರು ಈ ಅವಕಾಶ ಅವರಿಗೆ ಸಿಗಬೇಕು. ಇದಕ್ಕೆ ನಿರ್ದಿಷ್ಟ ಮಾರ್ಗಸೂಚಿಗಳಿದ್ದು, ಅದರಂತೆಯೇ ಈ ಅವಕಾಶ ನೀಡಲಾಗುವುದು. ನಮ್ಮ ತೀರ್ಮಾನ ಕೇವಲ ಆರತಿ ವಿಚಾರಕ್ಕೆ ಮಾತ್ರ. ಉಳಿದಂತೆ ಎಲ್ಲಾ ಮಾರ್ಗಸೂಚಿಗಳು ತಿರುಪತಿ ಆಡಳಿತ ಮಂಡಳಿಯಂತೆ ಇರಲಿದೆ. ಅವರ ಮಾರ್ಗಸೂಚಿಯಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ ಎಂದು ತಿಳಿಸಿದರು.

ಮಾಜಿ ಸಂಸದರಾದ ಎಚ್. ಹನುಮಂತಪ್ಪ ಅವರು ಕಾಂಗ್ರೆಸ್ ಪಕ್ಷದ ಹಿರಿಯ ಮುತ್ಸದ್ದಿ. ಮೂರು ಬಾರಿ ರಾಜ್ಯಸಭೆ ಸದಸ್ಯರಾಗಿದ್ದರು. ರೈಲ್ವೆ ಆಯೋಗಕ್ಕೆ ಅಧ್ಯಕ್ಷರಾಗಿದ್ದರು. 45 ವರ್ಷಗಳಿಂದ ನನಗೆ ಆತ್ಮೀಯರಾಗಿದ್ದರು. ನಮ್ಮ ಪಕ್ಷದ ಉಪಾಧ್ಯಕ್ಷರಾಗಿ, ಸಂಸದೀಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ನಾನು, ಕೆಪಿಸಿಸಿ ಅಧ್ಯಕ್ಷರಾದ ಬಿ.ಕೆ. ಹರಿಪ್ರಸಾದ್, ಡಿಸಿಎಂ ಪರಮೇಶ್ವರ್, ಸಚಿವರಾದ ಮುನಿಯಪ್ಪ ಅವರು ಅಂತಿಮ ನಮನ ಸಲ್ಲಿಸಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ರಾಜ್ಯ ಹಾಗೂ ರಾಷ್ಟ್ರದ ಸಮಸ್ಯೆಗಳಿಗೆ ಮಾರ್ಗದರ್ಶನ ಕೊಟ್ಟ ಹಿರಿಯ ನಾಯಕರು. ಅವರಿಗೆ ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ'' ಎಂದು

### ರೈತರನ್ನು ಉಳಿಸಬೇಕು, ಕುಡಿಯುವ ನೀರು ಪೂರೈಸಬೇಕು



ಕಾವೇರಿ ವಿಚಾರದಲ್ಲಿ ನಾವು ರೈತರನ್ನು ಬದುಕಿಸಬೇಕು. ಕುಡಿಯುವ ನೀರನ್ನು ಪೂರೈಸಬೇಕು, ತಮಿಳುನಾಡು ಪಾಲಿನ ನೀರು ಹರಿಸುವ ಕೋರ್ಟ್ ಆದೇಶವನ್ನೂ ಪಾಲನೆ ಮಾಡಬೇಕು. ಜು.15ರಂದು ಕಾವೇರಿ ಮಂಡಳಿ ಸಭೆ ನಡೆಯಲಿದೆ.

ಆ ಸಭೆಯಲ್ಲಿ ನಮ್ಮ ರಾಜ್ಯದ ವಾದ ಮಂಡಿಸುತ್ತೇವೆ. ನಂತರ ತೀರ್ಮಾನ ತಿಳಿಸುತ್ತೇವೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸಿಎಂ ಗೃಹ ಕಚೇರಿ ಕೃಷ್ಣಾ ಬಳಿ ಇಂದು ಮಾತನಾಡಿದ ಅವರು, ಮಂಡ್ಯ ಶಾಸಕರು ಕಾವೇರಿ ನೀರು ಬಿಡುವಂತೆ ಮನವಿ ಮಾಡಿರುವ ಬಗ್ಗೆ ಪ್ರತಿಕ್ರಿಯಿಸುತ್ತಾ, ಮಂಡ್ಯದವರು, ಶ್ರೀರಂಗಪಟ್ಟಣದವರು, ಜಿಲ್ಲಾ ಸಚಿವರು ಬಂದು ಭೇಟಿ ಮಾಡಿದ್ದರು. ಸಭೆಯ ಬಳಿಕ ತೀರ್ಮಾನ ತಿಳಿಸುತ್ತೇವೆ ಎಂದು ಹೇಳಿದರು. ಕೆಪಿಎಸ್‌ಸಿ ಅಧ್ಯಕ್ಷರ ಅಮಾನತಿನ ಬಗ್ಗೆ ಪ್ರತಿಕ್ರಿಯಿಸುತ್ತಾ, ರಾಜ್ಯಪಾಲರು ಈ ಆದೇಶ ಮಾಡಿದ್ದಾರೆ.

**ಈ ದಿನದ ದರ** ಪೆಟ್ರೋಲ್: 111.25₹/L | ಡೀಸೆಲ್ : 99.14₹/L | ಬಂಗಾರ: ₹ 14,291/Gram 24ct ₹13,100/Gram 22ct | ಬೆಳ್ಳಿ: ₹235.00/Gram

# ಶಿರಾ ಜುಂಜಪ್ಪ ಮಹಾದ್ವಾರಕ್ಕೆ ಶಿಲಾನ್ಯಾಸ, ಎಸ್‌ಟಿ ಮೀಸಲಾತಿ ಹೋರಾಟ

• **ಉದಯವಾಹಿನಿ, ಶಿರಾ**




ಜುಂಜಪ್ಪನ ಕ್ಷೇತ್ರ ತಾಲ್ಲೂಕಿನ ಹೆಮ್ಮೆಯ ಸಂಕೇತ. ಇಂತಹ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದು ಎಲ್ಲರ ಕರ್ತವ್ಯ ಎಂದು ವಿಧಾನ ಪರಿಷತ್ ಸದಸ್ಯ ಚಿದಾನಂದ್ ಎಂ.ಗೌಡ ಹೇಳಿದರು. ನಗರದ ಚಂಗಾವರ ವೃತ್ತದಲ್ಲಿ ಭಾನುವಾರ ಜುಂಜಪ್ಪ ಸ್ವಾಮಿ ಮಹಾದ್ವಾರ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.

ರಾಜ್ಯದ ಮೂಲೆ ಮೂಲೆಗಳಿಂದ ಬರುವ ಭಕ್ತರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ 15 ಲಕ್ಷ ವೆಚ್ಚದಲ್ಲಿ ವೀರಜುಂಜಪ್ಪ ಸ್ವಾಮಿ ದೇವಸ್ಥಾನದ ಪ್ರವೇಶದ್ವಾರ ನಿರ್ಮಿಸಲಾಗುತ್ತಿದೆ. ಇದು ಐತಿಹಾಸಿಕ ಯಾತ್ರಾ ಸ್ಥಳವಾಗಿದ್ದು, ಎಲ್ಲಾ ಧರ್ಮಗಳ ಎಲ್ಲ ಸಮುದಾಯಗಳ ಸಂಗಮ ಕ್ಷೇತ್ರವಾಗಿದೆ ಎಂದರು. ವನಕಲ್ಲು ಮಲ್ಲೇಶ್ವರ ಸ್ವಾಮಿ ಮಠದ ಪೀಠಾಧ್ಯಕ್ಷ ಬಸವ ರಮಾನಂದ ಸ್ವಾಮೀಜಿ ಮಾತನಾಡಿ '15ನೇ ಶತಮಾನದಲ್ಲಿ ನೆಲಮೂಲ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬಂದ ಜುಂಜಪ್ಪ ಮೂರು ಸಾವಿರ ಪಶುಗಳನ್ನು ಸಾಕಿದ್ದರು ಎಂದರು.

ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್ ಮಾತನಾಡಿ 'ಕಾಡುಗೊಲ್ಲ ಸಮುದಾಯ ಎಸ್‌ಟಿ ಮೀಸಲಾತಿಗಾಗಿ 25 ವರ್ಷಗಳಿಂದ ಹೋರಾಟ ಮಾಡುತ್ತಿದೆ. ಅದರೆ ಎಲ್ಲಾ ರಾಜಕೀಯ ಪಕ್ಷಗಳು ನಮ್ಮನ್ನು ಮತಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಸಮುದಾಯದವರು ಒಟ್ಟಾಗಿ ಸೇರಿ ಸಮಾಜವನ್ನು ಅಭಿವೃದ್ಧಿ ಮಾಡಬೇಕು ಎಂದರು.

ಸಂಸದ ಗೋವಿಂದ ಕಾರಜೋಳ, ತುಮುಲ್ ನಿರ್ದೇಶಕ ಎಸ್.ಆರ್. ಗೌಡ, ಶ್ರೀನಿವಾಸಬಾಬು, ಚಿಕ್ಕಣ್ಣ, ಬರಗೂರು ಶಿವಕುಮಾರ್, ಈಶ್ವರಪ್ಪ, ಗೌಡಪ್ಪ, ಪಟೇಲ್ ಕೃಷ್ಣಗೌಡ, ಕರಿಯಣ್ಣ, ಅಜ್ಜಣ್ಣ, ಹಾರೋಗೆರೆ ಮಾರಣ್ಣ, ಗುಳಿಗೇನಹಳ್ಳಿ ನಾಗರಾಜು, ಡಿ.ಎಂ.ಗೌಡ ಹಾಜರಿದ್ದರು.

> **ತಾಲ್ಲೂಕಿನಲ್ಲಿ ಕರ್ನಾಟಕ ಕಾಡುಗೊಲ್ಲ ಮಹಾ ಸಂಸ್ಥಾನ ಮಠ ನಿರ್ಮಾಣ ಮಾಡುತ್ತಿದ್ದೇವೆ. ಇದಕ್ಕೆ ಶಾಸಕರು 25 ಎಕರೆ ಜಮೀನು ನೀಡಲು ಒಪ್ಪಿದ್ದಾರೆ. ಇಲ್ಲಿ ವಿದ್ಯಾಕಾಶಿ ಮಾಡುವ ಗುರಿ ಇದೆ.** ಬಸವ ರಮಾನಂದ ಸ್ವಾಮೀಜಿ

# ಗಾಂಧೀಜಿ ಹೆಜ್ಜೆ ಇಟ್ಟಿದ್ದ ಮೈಸೂರಿನ ಬದನವಾಳು ಗ್ರಾಮದಲ್ಲಿ ನಿರ್ಮಾಣವಾಯ್ತು ಸಬರಮತಿ ಆಶ್ರಮ!ಎಸ್.ಡಿ.ಎಂ.ಸಿ ಅಧ್ಯಕ್ಷ ನಂಜುಂಡಪ್ಪ

• **ಉದಯವಾಹಿನಿ, ಮೈಸೂರು**

ಮಹಾತ್ಮ ಗಾಂಧೀಜಿ ಹೆಜ್ಜೆ ಇಟ್ಟಿದ್ದ ನೆಲದಲ್ಲಿ ಸಬರಮತಿ ಆಶ್ರಮ ನಿರ್ಮಾಣವಾಗಿದ್ದು, ಸ್ಥಳೀಯರ ಹಾಗೂ ಗಾಂಧೀವಾದಿಗಳ ಆಶಯ ಈ ಮೂಲಕ ನೆರವೇರಿದೆ. ಸ್ವಾತಂತ್ರ್ಯದ ಕಿಚ್ಚು ಹೊತ್ತಿಸಲು ದೇಶಾದ್ಯಂತ ಪರ್ಯಟನೆ ಮಾಡಿದ ಮಹಾತ್ಮ ಗಾಂಧೀಜಿಯವರು, ನಂಜನಗೂಡು ತಾಲೂಕಿನ ಬದನವಾಳು ಗ್ರಾಮದಲ್ಲಿರುವ ಬದನವಾಳು ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಖಾನೆಗೆ ಎರಡು ಬಾರಿ ಭೇಟಿ ಕೊಟ್ಟಿದ್ದರು. ಗಾಂಧೀಜಿ ಭೇಟಿಯ ನೆನಪಿನಾರ್ಥ ಅವರ ನೆಚ್ಚಿನ ಸಬರಮತಿ ಆಶ್ರಮವನ್ನು ನಿರ್ಮಾಣ ಮಾಡಲಾಗಿದ್ದು, ಗಾಂಧಿ ಜಯಂತಿಯಂದು ಲೋಕಾರ್ಪಣೆಗೊಳ್ಳುವ ನಿರೀಕ್ಷೆ ಇದೆ.

ಬದನವಾಳುವಿನಲ್ಲಿ ಸಬರಮತಿ ಆಶ್ರಮ ಶೀಘ್ರದಲ್ಲಿ ಉದ್ಘಾಟನೆಯಾಗಲಿದ್ದು, ಪ್ರವಾಸಿಗರನ್ನು ಸೆಳೆಯಲು ಪ್ರವಾಸೋದ್ಯಮ ಇಲಾಖೆ ಕೂಡಾ ಚಿಂತನೆ ನಡೆಸಿದೆ. ಇದು ಪ್ರವಾಸಿ ತಾಣವಾದರೆ ಬದನವಾಳುವಿಗೆ ಶುಕ್ರದೆಸೆ ತಿರುಗಲಿದೆ. ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಖಾನೆಯಲ್ಲಿ 1927 ಮತ್ತು 1932ರಲ್ಲಿ ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿ ಸ್ವದೇಶಿ ಉತ್ಪನ್ನಗಳಿಗೆ ಪ್ರೋತ್ಸಾಹದ ಮಾತಗಳನ್ನಾಡಿ ಹೋಗಿದ್ದ ಸ್ಥಳದ ಆವರಣದಲ್ಲಿ ಸಬರಮತಿ ಆಶ್ರಮ ನಿರ್ಮಾಣಗೊಂಡಿದ್ದು, ಪ್ರವಾಸಿಗರನ್ನು ಸೆಳೆಯಲು ಸಜ್ಜಾಗಲಿದೆ.ಅಲ್ಲಿಂದ ಕಟ್ಟಡದ ಕಾಮಗಾರಿ ಶುರುವಾಯಿತು. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಡಿಎಲ್) ಕಟ್ಟಡದ ನಿರ್ಮಾಣದ ಹೊಣೆ ವಹಿಸಲಾಗಿತ್ತು.2019ರಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. ನಂತರ 2020ರಲ್ಲಿ ಕೊರೊನಾ ಸಾಂಕ್ರಾಮಿಕ ವಿಜೃಂಭಿಸಿದ್ದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು. 2021ರಲ್ಲಿ ರೈಲ್ವೆ ಇಲಾಖೆಯು, ಬದನವಾಳು ರೈಲ್ವೆ ನಿಲ್ದಾಣ ಮೂಲಕ ರೈಲು ಗಾಡಿಗಳು ಸಂಚಾರ ಮಾಡುವುದರಿಂದ ಹಳಿಗಳ ಪಕ್ಕದಲ್ಲಿ ಯಾವುದೇ ಕಾಮಗಾರಿ ನಡೆಸಬಾರದು ಎಂದು ಆಕ್ಷೇಪಣೆ ವ್ಯಕ್ತಪಡಿಸಿತ್ತು. ಕಾಮಗಾರಿ ನಡೆಸಲು ರೈಲ್ವೆ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ಎನ್‌ಒಸಿ ಪಡೆದಿದ್ದೀರಾ? ಎಂದು ಆಕ್ಷೇಪಣೆ ಸಲ್ಲಿಸಿದ ಹಿನ್ನೆಲೆ ಎರಡು ವರ್ಷ ಕಾಮಗಾರಿ ಸ್ಥಗಿತಗೊಳಿಸಲಾಯಿತು.




## ಸತತ 8 ವರ್ಷಗಳ ಅವಿರತ ಪ್ರಯತ್ನ, ಈಗ ಪೂರ್ಣ

**ಬದನವಾಳುವಿನಲ್ಲಿ ಸಬರಮತಿ ಆಶ್ರಮ ನಿರ್ಮಾಣ ಮಾಡಬೇಕು ಎಂದು 2018ರಲ್ಲಿ ಪ್ರವಾಸೋದ್ಯಮ ಇಲಾಖೆಯು ಯೋಜನೆ ರೂಪಿಸಿ, ವರದಿಯನ್ನು ಸರ್ಕಾರಕ್ಕೆ ನೀಡಿತ್ತು. ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು 1 ಕೋಟಿ ರೂ. ಅನುದಾನ ಘೋಷಣೆ ಮಾಡಿ, ಆಶ್ರಮ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದ್ದರು. ನಂತರ 2019ರಲ್ಲಿ ಪ್ರವಾಸೋದ್ಯಮ ಇಲಾಖೆಗೆ 50 ಲಕ್ಷ ರೂ.ಗಳನ್ನು ರಾಜ್ಯ ಹಣಕಾಸು ಇಲಾಖೆ ನೀಡಿತ್ತು.**

## ಮೈಸೂರಿನಲ್ಲಿ ಮೂರು ಕಡೆ ಆಶ್ರಮ

**ಮಾನಸಗಂಗೋತ್ರಿಯಲ್ಲಿ ಸಬರಮತಿ ಆಶ್ರಮ, ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಮೀಪ ನೂತನವಾಗಿ ನಿರ್ಮಾಣಗೊಂಡಿರುವ ಸಬರಮತಿ ಆಶ್ರಮ (ಇನ್ನೂ ಉದ್ಘಾಟನೆಯಾಗಿಲ್ಲ) ಬದನವಾಳುವಿನಲ್ಲಿ ಸಬರಮತಿ ಆಶ್ರಮ (ಶೀಘ್ರದಲ್ಲಿ ಉದ್ಘಾಟನೆಯಾಗಲಿದೆ).**

**ಈ ಕುರಿತು ಮಾತನಾಡಿದ ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಅಧಿಕಾರಿ ಶರತ್ ಚಂದ್ರ, ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿರುವ ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಖಾನೆ ಆವರಣದಲ್ಲಿ ಸಬರಮತಿ ಆಶ್ರಮದ ಕಟ್ಟಡದ ಕಾಮಗಾರಿ ಶೇ.90ರಷ್ಟು ಪೂರ್ಣಗೊಂಡಿದ್ದು, ಈ ಬಾರಿಯ ಗಾಂಧಿ ಜಯಂತಿಯಂದು ಉದ್ಘಾಟನೆ ಮಾಡಬೇಕು ಎಂಬ ಚಿಂತನೆ ಇದೆ.**

## ಸ್ವೀಪ್ ನೋಡಲ್ ಅಧಿಕಾರಿಯಿಂದ ಮತದಾರರ ಸೌಲಭ್ಯ ಕೇಂದ್ರ ಪರಿಶೀಲನೆ

• **ಉದಯವಾಹಿನಿ, ಮೈಸೂರು**

ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್. ವಸ್ತ್ರದ್ ಅವರು ಮತದಾರರ ಸೌಲಭ್ಯ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.ವಿಶೇಷ ತೀವ್ರ ಪರಿಷ್ಕರಣೆ ಕಾರ್ಯಕ್ರಮದ ಅಂಗವಾಗಿ, ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವಲಯ ಕಚೇರಿ-9ರ ವ್ಯಾಪ್ತಿಯ ವಾರ್ಡ್ ಸಂಖ್ಯೆ-39ರ ಎಂಸಿಸಿ ಕಾಲೊನಿಯಲ್ಲಿ ಮತಗಟ್ಟೆ ಸಂಖ್ಯೆ 144, 145, 146 ಹಾಗೂ 147ರ ಮತದಾರರ ಅನುಕೂಲಕ್ಕಾಗಿ ಸ್ಥಾಪಿಸಲಾಗಿರುವ ಮತದಾರರ ಸೌಲಭ್ಯ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು. ಕೇಂದ್ರದಲ್ಲಿ ಸಾರ್ವಜನಿಕರಿಗೆ ಕಲ್ಪಿಸಿರುವ ಸೌಲಭ್ಯಗಳು, ಅರ್ಜಿಗಳ ಸ್ವೀಕಾರ, ದಾಖಲೆಗಳ ಪರಿಶೀಲನೆ ಹಾಗೂ ಪರಿಷ್ಕರಣೆ ಕಾರ್ಯದ ಪ್ರಗತಿ ಅವಲೋಕಿಸಿದರು. ಮತದಾರರೊಂದಿಗೆ ಸಂವಾದ ನಡೆಸಿ, ಕೇಂದ್ರದಲ್ಲಿ ದೊರೆಯುತ್ತಿರುವ ಸೇವೆಗಳ ಕುರಿತು ಮಾಹಿತಿ ಪಡೆದರು.

# ವೀಕೆಂಡ್ ಹಿನ್ನೆಲೆ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಭಕ್ತ ಸಾಗರ

• **ಉದಯವಾಹಿನಿ, ಗುಂಡ್ಲುಪೇಟೆ**




ವಾರಾಂತ್ಯದ ರಜೆ ಹಿನ್ನೆಲೆ ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಹಾಗೂ ಪ್ರವಾಸಿ ತಾಣವಾದ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಭಾನುವಾರ ಭಕ್ತರು ಮತ್ತು ಪ್ರವಾಸಿಗರಿಂದ ಕಿಕ್ಕಿರಿದು ತುಂಬಿತ್ತು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಸಾವಿರಾರು ಭಕ್ತರು ಶ್ರೀ ಗೋಪಾಲಸ್ವಾಮಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಬೆಟ್ಟವನ್ನ ಹೊದಿಕೆಯಂತೆ ಆವರಿಸಿದ್ದ ಹಿಮ, ತಂಪಾದ ಆಹ್ಲಾದಕರ ವಾತಾವರಣ ಹಾಗೂ ಹಚ್ಚಹಸಿರಿನ ಪ್ರಕೃತಿ ಸೌಂದರ್ಯ ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿಸಿತು. ಮೋಡಗಳ ನಡುವೆ ಕಾಣಿಸಿಕೊಂಡ ದೇವಾಲಯದ ನೋಟವನ್ನು ಕಣ್ತುಂಬಿಕೊಂಡ ಭಕ್ತರು, ಪ್ರಕೃತಿಯ ಮಡಿಲಿನಲ್ಲಿ ನೆಲೆಸಿರುವ ಗೋಪಾಲಸ್ವಾಮಿಯ ದರ್ಶನ ಪಡೆದು ಭಕ್ತಿಭಾವ ಮೆರೆದರು.

ಹಲವರು ಕುಟುಂಬ ಸಮೇತರಾಗಿ ಆಗಮಿಸಿ ಬೆಟ್ಟದ ರಮಣೀಯ ದೃಶ್ಯಗಳನ್ನು ತಮ್ಮ ಕ್ಯಾಮೆರಾಗಳಲ್ಲಿ ಸೆರೆಹಿಡಿದು ಸಂಭ್ರಮಿಸಿದರು. ಭಕ್ತರ ಸಂಖ್ಯೆ ಹೆಚ್ಚಿದ್ದರಿಂದ ದೇವಾಲಯ ಆವರಣ, ವಾಹನ ನಿಲುಗಡೆ ಪ್ರದೇಶ ಹಾಗೂ ಬೆಟ್ಟದ ರಸ್ತೆ ಮಾರ್ಗದಲ್ಲಿ ಕೆಲಕಾಲ ವಾಹನ ದಟ್ಟಣೆ ಉಂಟಾಯಿತು. ಆದರೂ ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ದೇವಾಲಯದ ಸಿಬ್ಬಂದಿ ಸಂಚಾರ ಮತ್ತು ಭಕ್ತರ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಿದರು.

ವಾರಾಂತ್ಯ ಹಾಗೂ ಸರ್ಕಾರಿ ರಜೆ ದಿನಗಳಲ್ಲಿ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಸಾವಿರಾರು ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಹೆಚ್ಚುವರಿ ಬಸ್ ಸೇವೆ, ವಾಹನ ನಿಲುಗಡೆ ವ್ಯವಸ್ಥೆ ಹಾಗೂ ಮೂಲಸೌಕರ್ಯಗಳನ್ನು ಮತ್ತಷ್ಟು ವಿಸ್ತರಿಸುವಂತೆ ಸ್ಥಳೀಯರು ಮುಜರಾಯಿ ಇಲಾಖೆಗೆ ಮನವಿ ಮಾಡಿದರು.

# ಡಿಕೆಶಿ ಅವರ ಜನಪರ ಕಾರ್ಯಕ್ಕೆ ಮೆಚ್ಚಿ ಕಾಂಗ್ರೆಸ್ ಸೇರ್ಪಡೆ - ಪಿ.ಅಶ್ವಥ್

• **ಉದಯವಾಹಿನಿ, ರಾಮನಗರ**




ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ಜನಪರ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ, ಅವರ ಸತ್ಸಂಕಲ್ಪಕ್ಕೆ ಹೆಗಲಾಗಲು ನಾವುಗಳು ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಯಾಗುತ್ತಿದ್ದೇವೆ ಎಂದು ಬಿಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಅಂಕನಹಳ್ಳಿ ಪಿ. ಅಶ್ವಥ್ ತಿಳಿಸಿದರು. ರಾಮನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ಮಾಜಿ ಶಾಸಕ ಕೆ. ರಾಜು ಸಮ್ಮುಖದಲ್ಲಿ ತಮ್ಮ ಸ್ನೇಹಿತರೊಂದಿಗೆ ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷ ಸೇರಿದ ಸಂಧರ್ಭದಲ್ಲಿ ಮಾತನಾಡಿದರು. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿ ಹಾಗೂ ಸ್ವಾಭಿಮಾನದ ರಾಜಕಾರಣಕ್ಕಾಗಿ ಜೆಡಿಎಸ್ ಪಕ್ಷ ತ್ಯಜಿಸಿ ಕಾಂಗ್ರೆಸ್ ಸೇರ್ಪಡೆಯಾಗುತ್ತಿದ್ದೇವೆ. ಡಿ.ಕೆ. ಸಹೋದರರು ಕೇವಲ ನಾಯಕರಲ್ಲ ಅವರು ನಮ್ಮ ಜಿಲ್ಲೆಯ ಮಣ್ಣಿನ ಮಕ್ಕಳು. ಪಕ್ಷಕ್ಕಾಗಿ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ದುಡಿಯುವ ಸಾಮಾನ್ಯ ಕಾರ್ಯಕರ್ತರುಗಳ ಮುಖಂಡರನ್ನು ಗುರುತಿಸಿ ಅವರಿಗೆ ಸೂಕ್ತ ಸ್ಥಾನಮಾನ ಹಾಗೂ ಗೌರವ ನೀಡುವ ಅಪರೂಪದ ಗುಣ ಹೊಂದಿರುವ ನಾಯಕರಾಗಿದ್ದಾರೆ. ನಮ್ಮೆಲ್ಲರ ಸ್ವಾಭಿಮಾನಕ್ಕೆ ಸಿಗಬೇಕಾದ ಗೌರವ, ನಂಬಿಕೆ ಮತ್ತು ವಿಶ್ವಾಸಕ್ಕೆ ಜೀವ ಕೊಡುವ ನಾಯಕರ ಜೊತೆ ನಾವಿದ್ದೇವ ಎನ್ನುವ ಹೆಮ್ಮೆಯಿಂದ ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಎ.ಇಕ್ಬಾಲ್ ಹುಸೇನ್ ಹಾಗೂ ಮಾಜಿ ಶಾಸಕ ಕೆ.ರಾಜು ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿ ಕಾಂಗ್ರೆಸ್ ಸದಸ್ಯತ್ವ ಸ್ವೀಕರಿಸುತ್ತಿದ್ದೇವೆ.ವಿಶಾಲ ಮನಸ್ಥಿತಿಯ ಕಾರ್ಯಕರ್ತರ ಕಷ್ಟಕ್ಕೆ ಧಾವಿಸುವ ನಾಯಕರು ನಮ್ಮ ಡಿ.ಕೆ. ಸಹೋದರರು ಮುಂಬರುವ ದಿನಗಳಲ್ಲಿ ನಮ್ಮ ಜಿಲ್ಲೆಯ ಜನತೆ ಅವರಿಗೆ ಮತ್ತಷ್ಟು ಶಕ್ತಿ ತುಂಬಿಸಲಿದ್ದಾರೆ. ಮುಂದಿನ ಚುನಾವಣೆಯಲ್ಲಿ ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ ತರುವುದೇ ನಮ್ಮೆಲ್ಲರ ಏಕೈಕ ಉದ್ದೇಶವಾಗಿದೆ. ನಾವು ಹಿಂದೆ ಇದ್ದ ಪಕ್ಷದ ನಾಯಕರ ಬಗ್ಗೆ ಈಗ ಮಾತನಾಡಲು ಇಷ್ಟಪಡುವುದಿಲ್ಲ, ಅದರ ಅವಶ್ಯಕತೆಯೂ ನಮಗಿಲ್ಲ. ಯಾಕಂದ್ರೆ, ನಂಬಿಕೆ, ವಿಶ್ವಾಸ ಮತ್ತು ಪ್ರೀತಿಗೆ ಅತ್ಯುನ್ನತ ಬೆಲೆ ಕೊಡುವ ನಾಯಕ ಜೊತೆ ನಾವು ಕೈಜೋಡಿಸಿದ್ದೇವೆ. ಈ ನಾಯಕತ್ವದ ನೆರಳಿನಲ್ಲಿ ನಮಗೆ ಭರವಸೆ ಸಿಕ್ಕಿರುವಾಗ ನಮ್ಮ ವೈಯಕ್ತಿಕ ಸ್ವಾಭಿಮಾನಕ್ಕೆ ಬೆಲೆ ಸಿಗುವುದರ ಜೊತೆಗೆ ನಮ್ಮ ಜಿಲ್ಲೆಯೂ ಅಭಿವೃದ್ಧಿ ಪಥದಲ್ಲಿ ಸಾಗಬೇಕು ಎನ್ನುವ ಪವಿತ್ರ ಉದ್ದೇಶದಿಂದ ನಾವು ಈ ನಿರ್ಧಾರಕ್ಕೆ ಬಂದಿದ್ದೇವೆ ಎಂದರು.

ಮಾಜಿ ಶಾಸಕ ಕೆ. ರಾಜು ಮಾತನಾಡಿ ಅಂಕನಹಳ್ಳಿ ಪಿ.ಅಶ್ವಥ್ ಅವರು ರಾಮನಗರ ತಾಲ್ಲೂಕಿನ ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಸೇವೆ ಸಲ್ಲಿಸಿ, ತಾಲ್ಲೂಕಿನಲ್ಲಿಯೇ ತಮ್ಮದೇ ಆದಂತಹ ನಾಯಕತ್ವವನ್ನು ಹೊಂದಿದ್ದರು. ಜೊತೆಗೆ, ಇವರು ಜೆಡಿಎಸ್ ತೊರೆದು, ಕಾಂಗ್ರೆಸ್ ಸೇರ್ಪಡೆಗೊಂಡಿರುವುದು ಸಾಕಷ್ಟು ಶಕ್ತಿ ತುಂಬಿದಂತೆ ಆಗುತ್ತಿದೆ.

ಇವರು ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ.

## ಕೆಆರ್‌ಎಸ್‌ನಿಂದ ಕೃಷಿಗೆ ನೀರು ಹರಿಸಿ: ನಾಳೆಯಿಂದ ಅನಿರ್ದಿಷ್ಟಾವಧಿ ಮುಷ್ಕರ

• **ಉದಯವಾಹಿನಿ, ಮಂಡ್ಯ**




ಕರ್ನಾಟಕದಲ್ಲಿ ಮಳೆ ಕೊರತೆಯಿಂದ ಜಲಾಶಯಗಳಲ್ಲಿ ನೀರಿನ ಪ್ರಮಾಣದಲ್ಲಿ ಕುಸಿತ ಕಂಡು ಬಂದಿದೆ. ಈ ಕಾರಣದಿಂದ ಮುಂಗಾರು ಹಂಗಾಮಿನ ಕೃಷಿಗೆ ನೀರು ಹರಿಸುವುದು ಕಷ್ಟ ಎಂದು ರಾಜ್ಯದ ಹಲವಾರು ನೀರಾವರಿ ಸಲಹಾ ಸಮಿತಿಗಳು ತೀರ್ಮಾನಿಸಿವೆ.

ಇದರ ನಡುವೆ ಮಂಡ್ಯ ಹಾಗೂ ಮೈಸೂರು ಜಿಲ್ಲೆ ವ್ಯಾಪ್ತಿಯ ಕೃಷಿ ಚಟುವಟಿಕೆಗಳಿಗೆ ನೀರು ಹರಿಸುವಂತೆ ಆಗ್ರಹಿಸಿ ರೈತ ಸಂಘವು ಜುಲೈ 14ರಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುತ್ತಿದೆ.

ಪಾಂಡವಪುರ ಶಾಸಕರಾಗಿರುವ ಸರ್ವೋದಯ ಪಕ್ಷದ ಕಾರ್ಯಾಧ್ಯಕ್ಷ ದರ್ಶನ್ ಪುಟ್ಟಣ್ಣಯ್ಯ ಅವರು ಪ್ರತಿಭಟನೆ ನೇತೃತ್ವ ವಹಿಸಲಿದ್ದಾರೆ. ಕೃಷ್ಣರಾಜಸಾಗರದಲ್ಲಿರುವ ಕಾರ್ಯಪಾಲಕ ಇಂಜಿನಿಯರ್ ಅವರ ಕಚೇರಿ ಎದುರು ಪ್ರತಿಭಟನೆ ಆರಂಭವಾಗಲಿದೆ.

ಒಣಗುತ್ತಿರುವ ಬೆಳೆಗಳಿಗೆ ತಕ್ಷಣ ಕಾವೇರಿ ಅಚ್ಚುಕಟ್ಟು ನಾಲೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ಮಂಡ್ಯ ಜಿಲ್ಲಾ ಘಟಕದ ವತಿಯಿಂದ ಕೆ.ಆರ್.ಎಸ್ ನಲ್ಲಿರುವ ಕಾರ್ಯಪಾಲಕ ಇಂಜಿನಿಯರ್ ಕಚೇರಿ ಜುಲೈ 14ರ ಮಂಗಳವಾರ ಬೆಳಿಗ್ಗೆ 11ರಿಂದ ನೀರು ಬಿಡುವವರೆವಿಗೂ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದ್ದಾರೆ. ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಅಧ್ಯಕ್ಷತೆಯಲ್ಲಿ ಕಳೆದ ವಾರವೇ ರೈತ ಪ್ರತಿನಿಧಿಗಳ ಸಭೆ ನಡೆದಿದ್ದು, ಸದ್ಯಕ್ಕೆ ಜಲಾಶಯದಲ್ಲಿ ಲಭ್ಯ ಇರುವ ನೀರಿನ ಸ್ಥಿತಿ ಗಮನಿಸಿದರೆ ಕೃಷಿಗೆ ನೀರು ಹರಿಸಲು ಆಗುವುದಿಲ್ಲ, ಪರಿಸ್ಥಿತಿ ನೋಡಿಕೊಂಡು ಮುಂದೆ ತೀರ್ಮಾನಿಸಲಾಗುವುದು ಎಂದು ತಿಳಿಸಲಾಗಿತ್ತು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರಿಂದ ಮುಖ್ಯಮಂತ್ರಿ ಅವರೇ ಕೃಷ್ಣರಾಜಸಾಗರ ಜಲಾಶಯದಿಂದ ನೀರು ಹರಿಸುವ ಕುರಿತು ನೀರಾವರಿ ಸಲಹಾ ಸಮಿತಿ ತೀರ್ಮಾನ ಕೈಗೊಳ್ಳುವಂತೆ ಸೂಚಿಸಿದ್ದರು.

## ಮೂರೇ ತಿಂಗಳಿಗೆ ಕುಸಿದ ಹೆದ್ದಾರಿ ಕಿರು ಸೇತುವೆ!

• **ಉದಯವಾಹಿನಿ, ಶ್ರೀರಂಗಪಟ್ಟಣ**

ತಾಲ್ಲೂಕಿನ ಕಿರಂಗೂರು ಬಳಿ, ಚಾಮರಾಜನಗರ-ಜೇವರ್ಗಿ ರಾಷ್ಟ್ರೀಯ ಹೆದ್ದಾರಿ 150ಎ ರಲ್ಲಿ ಬರುವ ಕಿರು ಸೇತುವೆ (ಡಕ್) ನಿರ್ಮಾಣಗೊಂಡ ಮೂರೇ ತಿಂಗಳಿಗೆ ಕುಸಿದಿದೆ. ಕಿರಂಗೂರು ಬಳಿ ಹರಿಯುವ ಚಿಕ್ಕದೇವರಾಯಸಾಗರ (ಸಿಡಿಎಸ್) ನಾಲೆಯ ವಿತರಣಾ ನಾಲೆಗೆ ಅಡ್ಡಲಾಗಿ, ವೇ ಬ್ರಿಡ್ಜ್ ಬಳಿ ನಿರ್ಮಿಸಿರುವ ಡಕ್ ಹೆದ್ದಾರಿಯ ಮಧ್ಯ ಭಾಗದಲ್ಲಿ ಕುಸಿತ ಕಂಡಿದೆ.

ಸುಮಾರು 4 ಅಡಿ ಅಗಲ ಕುಸಿದಿದೆ. ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ತೊಡಕಾಗಿದೆ. ಕಳಪೆ ಕಾಮಗಾರಿಯಿಂದಾಗಿ ನಿರ್ಮಾಣಗೊಂಡ ಮೂರೇ ತಿಂಗಳಿಗೆ ಡಕ್ ಕುಸಿದಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಿರಂಗೂರು ಬನ್ನಿ ಮಂಟಪದಿಂದ ಪಾಂಡವಪುರ ರೈಲ್ವೆ ನಿಲ್ದಾಣದವರೆಗೆ ರಾಷ್ಟ್ರೀಯ ಹೆದ್ದಾರಿಯ ವಿಸ್ತರಣೆ ಮತ್ತು ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ಕಾಮಗಾರಿ ಇನ್ನೂ ಪ್ರಗತಿಯ ಹಂತದಲ್ಲಿ ಇರುವಾಗಲೇ ಈ ಡಕ್ ಕುಸಿದಿರುವುದು ಟೀಕೆಗೆ ಗ್ರಾಸವಾಗಿದೆ.

'ಈ ಡಕ್ ನಿರ್ಮಾಣಕ್ಕೆ ಕಳಪೆ ಗುಣಮಟ್ಟದ ಪರಿಕರ ಬಳಸಲಾಗಿದೆ. ಗುಣಮಟ್ಟದ ಸಿಮೆಂಟ್, ಕಬ್ಬಿಣ, ಜಲ್ಲಿ ಪುಡಿ ಬಳಸಿದ್ದು, ಕೈಯಲ್ಲಿ ಮುಟ್ಟಿದರೂ ಸಿಮೆಂಟ್ ಚಕ್ಕೆಗಳು ಪುಡಿ ಪುಡಿಯಾಗುತ್ತಿದೆ. ಡಾಂಬರು ಕಿತ್ತು ಬರುತ್ತಿದೆ. ಕಬ್ಬಿಣದ ಸರಳು ಬಗ್ಗಿವೆ.

ಈ ಬಗ್ಗೆ ತನಿಖೆ ನಡೆಸಿ ಸಂಬಂಧಪಟ್ಟ ಇಂಜಿನಿಯರ್ ವಿರುದ್ಧ ಕ್ರಮ ಕೈಗೊಳ್ಳಬೇಕು. ಗುತ್ತಿಗೆದಾರನನ್ನು ಕಪ್ಪುಪಟ್ಟಿಗೆ ಸೇರಿಸಬೇಕು' ಎಂದು ಸರ್ವೋದಯ ಕರ್ನಾಟಕ ಪಕ್ಷದ ತಾಲ್ಲೂಕು ಘಟಕದ ಅಧ್ಯಕ್ಷ ಬಿ.ಎಸ್. ರಮೇಶ್ ಆಗ್ರಹಿಸಿದರು. 'ಈ ಹೆದ್ದಾರಿಯಲ್ಲಿ ಪ್ರತಿದಿನ ಸಹಸ್ರಾರು ವಾಹನಗಳು ಸಂಚರಿಸುತ್ತವೆ. ಡಕ್ ಕುಸಿದಿರುವ ಸ್ಥಳದಲ್ಲಿ, ಕೆಲವೇ ಗಂಟೆಗಳ ಅಂತರದಲ್ಲಿ ಐದಾರು ಮಂದಿ ಬೈಕ್ ಸವಾರರು ಬಿದ್ದು ಗಾಯಗೊಂಡಿದ್ದಾರೆ. ಕಳಪೆ ಕಾಮಗಾರಿಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸಾಗರ್ ಒತ್ತಾಯಿಸಿದರು.

' ಎಸ್‌ಟಿಜಿ ಇನ್ಫ್ರಾಸ್ಟ್ರಕ್ಚರ್ ಪ್ರೈ. ಲಿಮಿಟೆಡ್ ಈ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯ ಗುತ್ತಿಗೆ ಪಡೆದಿದೆ.

ಮೇಲುಕೋಟೆ ವೈರಮುಡಿ ಉತ್ಸವದ ವಾಹನ ಈ ಮಾರ್ಗದಲ್ಲಿ ಬರುತ್ತಿದ್ದ ಕಾರಣ ತುರ್ತಾಗಿ ಕೆಲಸ ಮುಗಿಸಲಾಗಿದೆ. ಸರಿಯಾಗಿ ಕ್ಯೂರಿಂಗ್ ಮಾಡಲು ಸಾಧ್ಯವಾಗದ ಕಾರಣ ಡಕ್ ಕುಸಿದಿದೆ. ಕುಸಿದಿರುವ ಕಿರು ಸೇತುವೆಯನ್ನು ಶೀಘ್ರ ಪುನರ್ ನಿರ್ಮಾಣ ಮಾಡಲಾಗುವುದು.

# ರಸ್ತೆ ಕಾಮಗಾರಿ ವಿಳಂಬ: ಕಂಗೆಟ್ಟ ಜನಸಾಮಾನ್ಯರು

## ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಮತ್ತು ಶಾಲೆಯಿಂದ ಮಕ್ಕಳನ್ನು ಮನೆಗೆ ಕರೆದೊಯ್ಯಲು ಪೋಷಕರು ಇದೇ ಮಾರ್ಗ ಅವಲಂಬಿಸಿದ್ದಾರೆ.

• **ಉದಯವಾಹಿನಿ, ಶಿಡ್ಲಘಟ್ಟ**

ನಗರದ ಪ್ರಮುಖ ವಾಣಿಜ್ಯ ಕೇಂದ್ರವಾಗಿರುವ ವಾಸವಿ ದೇವಾಲಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆಯಾಗಿ ಒಂದು ವರ್ಷ ಪೂರ್ಣಗೊಂಡಿದೆ. ಆದರೆ, ಈವರೆಗೆ ರಸ್ತೆ ಕಾಮಗಾರಿ ಮಾತ್ರ ಪೂರ್ಣವಾಗಿಲ್ಲ, ಇದರಿಂದಾಗಿ ಜನಸಾಮಾನ್ಯರು ಪ್ರತಿನಿತ್ಯವೂ ಈ ರಸ್ತೆಯಲ್ಲಿ ಓಡಾಡಲು ಹರಸಾಹಸವಾಗಿದೆ. 250 ಮೀಟರ್ ಉದ್ದದ ಈ ರಸ್ತೆ ನಗರದ ವ್ಯಾಪಾರಿ ಕೇಂದ್ರದ ಹೃದಯವನ್ನೇ ಕಿತ್ತು ಹಾಕಿದಂತಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಡಿಸಿದರು.

ಈ ಹಿಂದೆ ರಸ್ತೆ ಅಭಿವೃದ್ಧಿಗೆ ಎರಡು ಬಾರಿ ಶಂಕು ಸ್ಥಾಪನೆ ಮಾಡಲಾಗಿತ್ತು. ಆದರೆ, ಅನುದಾನ ಬಿಡುಗಡೆಯಾಗದೆ ಕಾಮಗಾರಿ ಆರಂಭವಾಗಿರಲಿಲ್ಲ. ಶಾಸಕ ಬಿ.ಎನ್. ರವಿಕುಮಾರ್ 2ನೇ ಬಾರಿ ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಈ ಕಾಮಗಾರಿಗೆ 1 ಕೋಟಿ ಬಿಡುಗಡೆಯಾಗಿತ್ತು. ಆದಾಗ್ಯೂ, 2 ತಿಂಗಳ ಬಳಿಕ ಕಾಮಗಾರಿ ಆರಂಭವಾಯಿತು.ಚರಂಡಿ,




**ನೀರಿನ ಸಂಪರ್ಕ ಧ್ವಂಸ:** ರಸ್ತೆ ಅಗೆಯುವಾಗ ಚರಂಡಿ, ನಲ್ಲಿ ಸಂಪರ್ಕ ಹಾಗೂ ಒಳಚರಂಡಿ ವ್ಯವಸ್ಥೆಯು ಸಂಪೂರ್ಣವಾಗಿ ಹಾಳಾಗಿತ್ತು. ಈ ವೇಳೆ ತಾವೇ ವೈಯಕ್ತಿಕ 2 ಸಾವಿರದಿಂದ 3 ಸಾವಿರದವರೆಗೆ ಹಣ ವ್ಯಯಿಸಿ ದುರಸ್ತಿ ಮಾಡಿಕೊಂಡಿದ್ದಾಗಿ ಸ್ಥಳೀಯರು ಶಾಸಕ, ಪೌರಾಯುಕ್ತ ಮತ್ತು ಮಾಧ್ಯಮದ ಎದುರು ಹೇಳಿಕೊಂಡಿದ್ದಾರೆ.

ಗಂಗಮ್ಮ, ವೆಂಕಟೇಶ್ವರ, ವಾಸವಿ, ಮುನೇಶ್ವರ ದೇವಾಲಯಗಳ ಸಾಲು, ಚಿನ್ನ-ಬೆಳ್ಳಿ ಹಾಗೂ ಸಗಟು ವ್ಯಾಪಾರ ಮಳಿಗೆಗಳಿರುವ ಈ ರಸ್ತೆಯಲ್ಲಿ ಶಾಲೆಗಳು, ವಿದ್ಯಾಸಂಸ್ಥೆಗಳು ಮತ್ತು ಅಂಗನವಾಡಿ ಕೇಂದ್ರಗಳಿವೆ. ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಮತ್ತು ಶಾಲೆಯಿಂದ ಮಕ್ಕಳನ್ನು ಮನೆಗೆ ಕರೆದೊಯ್ಯಲು ಪೋಷಕರು ಇದೇ ಮಾರ್ಗ ಅವಲಂಬಿಸಿದ್ದಾರೆ. ಆದರೆ, ಮಣ್ಣು ರಸ್ತೆ ಮತ್ತು ಚರಂಡಿಗಳ ನಡುವೆಯೇ ನಡೆದು ಹೋಗಬೇಕಾಗಿದ್ದು, ಮಳೆ ಬಂದಾಗ ಜಾರಿಬಿದ್ದು ಕೈ-ಕಾಲು ಮುರಿದುಕೊಳ್ಳುವ ಅಪಾಯ ಇದೆ. ಇತ್ತೀಚೆಗೆ ಅಪ್ಪಿ ಎಂಬ ಯುವಕ ಈ ರಸ್ತೆಯಲ್ಲಿ ಬಿದ್ದು, ಆ ಯುವಕ ಒಂದೆರಡು ದಿನಗಳಲ್ಲಿ ಮೃತಪಟ್ಟಿದ್ದ ಘಟನೆಯೂ ನಡೆದಿತ್ತು.

ಇಡೀ ನಗರದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಕಂದಾಯ ಹಾಗೂ ಜಿಎಸ್‌ಟಿ ಸೇರಿ ಎಲ್ಲಾ ತೆರಿಗೆಗಳನ್ನು ಇಲ್ಲಿನ ವರ್ತಕರು ಪಾವತಿಸುತ್ತಾರೆ. ಆದರೆ, ರಸ್ತೆ ಕಾಮಗಾರಿ ಇನ್ನೂ ಪೂರ್ಣಗೊಳ್ಳದ ಕಾರಣ ವ್ಯಾಪಾರ-ವಹಿವಾಟು ಇಲ್ಲದೆ ವರ್ತಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

### ವ್ಯಾಪಾರಿಗಳ ಬೇಸರ

**ರಸ್ತೆ ದುರಸ್ತಿ ಕಾಮಗಾರಿಯಿಂದಾಗಿ ಈ ಭಾಗದಲ್ಲಿ ಜನಸಾಮಾನ್ಯರು ಸುಳಿಯುತ್ತಲೇ ಇಲ್ಲ, ಈ ಹಿಂದೆ ಸದಾ ಜನಜಂಗುಳಿಯಿಂದ ತುಂಬಿರುತ್ತಿದ್ದ ಅಂಗಡಿಗಳು ಇದೀಗ ಬಿಕೊ ಎನ್ನುತ್ತಿವೆ. ಮನೆಗೆ ನೀರು ತರುವುದು ದೊಡ್ಡ ಸಾಹಸವಾಗಿದೆ. ಓಡಾಡಲು ಆಗ ದುಃಸ್ಥಿತಿ ನಿರ್ಮಾಣವಾಗಿದೆ ಎಂದು ವರ್ತಕರು ಅಳಲು ತೋಡಿಕೊಂಡರು.ಗಡುವು ಮುಗಿದರೂ ಪೂರ್ಣಗೊಳ್ಳದ ಕಾಮಗಾರಿ ರಸ್ತೆ ದುರಸ್ತಿಗಾಗಿ ಇಡೀ ರಸ್ತೆ ಅಗೆದಿದ್ದರಿಂದ ಎರಡೂ ಬದಿಯ ಚರಂಡಿ ವ್ಯವಸ್ಥೆ ಮುಚ್ಚಿ, ನೀರಿನ ಪೈಪ್ ಮತ್ತು ಒಳಚರಂಡಿಗೆ ಹಾನಿಯಾಗಿತ್ತು. ಈ ಸಂಬಂಧ ನಗರಸಭೆಗೆ ದೂರು ಸಲ್ಲಿಸಿದರೂ, ಯಾವುದೇ ಪ್ರಯೋಜನವಾಗಿರಲಿಲ್ಲ. ಇದರಿಂದಾಗಿ ಸ್ಥಳೀಯ ನಿವಾಸಿಗಳು ಮತ್ತು ವರ್ತಕರು ಶಾಸಕರ ಗಮನಕ್ಕೆ ತಂದಿದ್ದರು.**

ಉದಯ ವಾಹಿನಿ

ಪ್ರಾದೇಶಿಕ

ಮಂಗಳವಾರ 14 ಜುಲೈ 2026 | 03

## ಮಿನಿ ನ್ಯೂಸ್

### ಮತದಾರರ ಪಟ್ಟಿ ಪರಿಷ್ಕರಣೆ ಪರಿಶೀಲಿಸಿದ ಜಿಲ್ಲಾಧಿಕಾರಿ




• **ಉದಯವಾಹಿನಿ, ಮುಳಬಾಗಿಲು**

ತಾಲ್ಲೂಕಿನ ಪುಟ್ಟೇನಹಳ್ಳಿ, ತಾಯಲೂರು ಹಾಗೂ ನಗರದ ಶಾಮೀರ್ ಮೊಹಲ್ಲಾದ 30, 31ನೇ ವಾರ್ಡ್‌ಗಳಿಗೆ ಭಾನುವಾರ ಭೇಟಿ ನೀಡಿದ ಜಿಲ್ಲಾಧಿಕಾರಿ ಎಂ.ಆರ್. ರವಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಪರಿಶೀಲಿಸಿದರು. ಪುಟ್ಟೇನಹಳ್ಳಿ, ತಾಯಲೂರಿನಲ್ಲಿ ಅಧಿಕಾರಿಗಳೊಂದಿಗೆ ಪರಿಷ್ಕರಣೆ ಕುರಿತು ಚರ್ಚಿಸಿ, ಮನೆ ಮನೆಗೂ ಕಡ್ಡಾಯವಾಗಿ ಖುದ್ದು ಭೇಟಿ ನೀಡಿ ಪರಿಷ್ಕರಣೆಯನ್ನು ಯಶಸ್ವಿಯಾಗಿ ನಡೆಸಬೇಕು ಎಂದು ಸೂಚಿಸಿದರು. ನಗರದ ಶ್ರೀನಿವಾಸಪುರ ರಸ್ತೆಯ ಪಕ್ಕದ ವಾರ್ಡ್ ಸಂಖ್ಯೆ 30, 31ರಲ್ಲಿ ಬಿಎಲ್‌ಒ, ಬಿಎಲ್‌ಒ 2ಗಳೊಂದಿಗೆ ಸಮಾಲೋಚನೆ ನಡೆಸಿ ನಂತರ ಎರಡೂ ವಾರ್ಡ್‌ಗಳ ಕೆಲವು ಮನೆಗಳಿಗೆ ಭೇಟಿ ನೀಡಿ, ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಪಡೆಯುತ್ತಿದ್ದಾರಾ ಎಂದು ಪರಿಶೀಲಿಸಿದರು.

ಸಾರ್ವಜನಿಕರು ತಮಗೆ ನೀಡಿರುವ ಅರ್ಜಿಗಳಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ನೀಡಬೇಕು. ಮತದಾರರ ಪಟ್ಟಿಯಲ್ಲಿ ಯಾವುದೇ ಲೋಪ ದೋಷ, ತಿದ್ದುಪಡಿ, ಸೇರ್ಪಡೆ ಆಗದೆ ಬಿಟ್ಟಿರುವುದು, ಮೃತರಾದವರ ಹೆಸರನ್ನು ತೆಗೆಯದೆ ಇದ್ದರೆ ಡಿಲೀಟ್ ಮಾಡಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಆರ್. ರವಿ ತಿಳಿಸಿದರು.

### ಸರ್ಕಾರಿ ಶಾಲೆಗಳಿಗೆ ದಾನಿಗಳ ಸಂಖ್ಯೆ ಹೆಚ್ಚಾಗಲಿ: ಎಸ್.ಡಿ.ಎಂ.ಸಿ ಅಧ್ಯಕ್ಷ ನಂಜುಂಡಪ್ಪ




• **ಉದಯವಾಹಿನಿ, ಗುಡಿಬಂಡೆ**

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ದಾನಿಗಳ ಸಹಕಾರ ಅತ್ಯಂತ ಅಗತ್ಯವಾಗಿದ್ದು, ಇಂತಹ ಸಮಾಜಮುಖಿ ಕಾರ್ಯಗಳಿಗೆ ಇನ್ನಷ್ಟು ದಾನಿಗಳು ಮುಂದೆ ಬರಬೇಕು ಎಂದು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ನಂಜುಂಡಪ್ಪ ತಿಳಿಸಿದರು.

ತಾಲೂಕಿನ ದಪ್ಪರ್ತಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಡೆಲ್ ಟೆಕ್ನಾಲಜಿಸ್, ಹಾಗೂ ಯೂತ್ ಫಾರ್ ಸೇವಾ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿದ್ದ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಲೇಖನ ಸಾಮಗ್ರಿಗಳ ವಿತರಣಾ ಕಾರ್ಯಕ್ರಮ ದಲ್ಲಿ ಮಾತನಾಡಿದರು. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅಗತ್ಯ ಶೈಕ್ಷಣಿಕ ಸಾಮಗ್ರಿಗಳನ್ನು ಒದಗಿಸುವ ಮೂಲಕ ದಾನಿಗಳು ಮಕ್ಕಳ ಶಿಕ್ಷಣಕ್ಕೆ ಹೊಸ ಉತ್ಸಾಹ ತುಂಬುತ್ತಿದ್ದಾರೆ. ಇಂತಹ ಸೇವೆಗಳಿಂದ ವಿದ್ಯಾರ್ಥಿಗಳ ಕಲಿಕೆಗೆ ಉತ್ತೇಜನ ದೊರೆಯುವುದರ ಜೊತೆಗೆ ಪೋಷಕರ ಮೇಲಿನ ಆರ್ಥಿಕ ಹೊರೆ ಕೂಡ ಕಡಿಮೆಯಾಗುತ್ತದೆ. ಸಮಾಜದ ಅಭಿವೃದ್ಧಿಯಲ್ಲಿ ದಾನಿಗಳ ಪಾತ್ರ ಅಪಾರ ವಾಗಿದ್ದು, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಇನ್ನಷ್ಟು ದಾನಿಗಳು ಕೈಜೋಡಿಸಬೇಕು ಎಂದರು.ಕಾರ್ಯಕ್ರಮದಲ್ಲಿ ಡೆಲ್ ಟೆಕ್ನಾಲಜಿಸ್ ನ ಶ್ರೀನಾಥ್ ಮಾತನಾಡಿ, ಮಕ್ಕಳ ಶಿಕ್ಷಣಕ್ಕೆ ಅಗತ್ಯವಾದ ನೆರವು ನೀಡುವುದು ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆಯ ಭಾಗವಾಗಿದ್ದು, ಭವಿಷ್ಯದಲ್ಲಿಯೂ ಶಿಕ್ಷಣ ಕ್ಷೇತ್ರಕ್ಕೆ ಸಹಕಾರ ಮುಂದುವರಿಸಲಾಗುವುದು.

### ಫಲಾನುಭವಿಗಳಿಗೆ ಕಂದಾಯ ಹಕ್ಕುಪತ್ರ ಮತ್ತು ಇ-ಸ್ವತ್ತು ವಿತರಣೆ ಕಾರ್ಯಕ್ರಮ

• **ಉದಯವಾಹಿನಿ, ಗೌರಿಬಿದನೂರು**

ತಾಲ್ಲೂಕಿನ ತೊಂಡೇಬಾವಿ ಹೋಬಳಿಯ ಇಂದಿರಾ ನಗರದಲ್ಲಿ ತಾಲ್ಲೂಕು ಕಂದಾಯ ಇಲಾಖೆ ತಾಲ್ಲೂಕು ಪಂಚಾಯಿತಿ ವತಿಯಿಂದ ಫಲಾನುಭವಿಗಳಿಗೆ ಕಂದಾಯ ಹಕ್ಕುಪತ್ರ ಮತ್ತು ಇ-ಸ್ವತ್ತು ವಿತರಣಾ ಕಾರ್ಯಕ್ರಮವನ್ನು ಈಚೆಗೆ ಹಮ್ಮಿಕೊಳ್ಳಲಾಗಿತ್ತು.

ಶಾಸಕ ಕೆ.ಎಚ್. ಪುಟ್ಟಸ್ವಾಮಿಗೌಡ ಮಾತನಾಡಿ, 'ಮನೆ ನಿರ್ಮಾಣಕ್ಕೆಫಲಾನುಭವಿಗಳು ಸಾಲ-ಸೌಲಭ್ಯ ಪಡೆಯಲು ಅನುಕೂಲವಾಗುವಂತೆ ಹಕ್ಕುಪತ್ರ ಮತ್ತು ಇ-ಸ್ವತ್ತು ವಿತರಣೆ ಪ್ರಕ್ರಿಯೆ ಆರಂಭಿಸಲಾಗಿದೆ' ಎಂದರು.

'ನಗರ ಪ್ರದೇಶದಲ್ಲಿ ಸುಮಾರು 8,500 ಇ-ಸ್ವತ್ತುಗಳನ್ನು ವಿತರಿಸಲಾಗಿದೆ. ಗ್ರಾಮೀಣ ಭಾಗದಲ್ಲೂ ಈ ಪ್ರಕ್ರಿಯೆ ಆರಂಭಿಸಲಾಗಿದೆ. ಪಾರದರ್ಶಕವಾಗಿ ಇ-ಸ್ವತ್ತು ವಿತರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ತಾಲ್ಲೂಕಿನಾದ್ಯಂತ ಸುಮಾರು 21,000 ಇ-ಸ್ವತ್ತುಗಳನ್ನು ವಿತರಿಸುವ ಯೋಜನೆಗೆ ಚಾಲನೆ ನೀಡಲಾಗಿದೆ' ಎಂದರು.

ತಹಶೀಲ್ದಾರ್ ಅರವಿಂದ್ ಕೆ.ಎಂ., ಸಾರ್ವಜನಿಕ ಸೇವೆ ಪಡೆಯಲು ಜನರಿಗೆ ಯಾವುದೇ ಅಡಚಣೆಗಳಾಗದಂತೆ ಆಡಳಿತಾತ್ಮಕ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವಂತೆ ಸಿಬ್ಬಂದಿಗೆ ಸೂಚಿಸಲಾಗಿದೆ ಎಂದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಜಿ.ಕೆ.ಹೊನ್ನಯ್ಯ ಮಾತನಾಡಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ವೆಂಕಟರಾಮರೆಡ್ಡಿ, ಎಂ.ಡಿ. ನರಸಿಂಹಮೂರ್ತಿ, ಗೋಪಿನಾಥ್, ಗಂಗಾಧರಪ್ಪ, ಕಂದಾಯ ಮತ್ತು ಗ್ರಾ. ಪಂ. ಅಧಿಕಾರಿಗಳು, ಸಿಬ್ಬಂದಿ ಹಾಗೂ ಫಲಾನುಭವಿಗಳು ಇದ್ದರು.

### ಗೃಹಲಕ್ಷ್ಮಿ ಯೋಜನೆ ಇ-ಕೆವೈಸಿ ವದಂತಿಗೆ ಕಿವಿಗೊಡಬೇಡಿ ಎಂದು ಮನವಿ

• **ಉದಯವಾಹಿನಿ**, ಕೋಲಾರ

ರಾಜ್ಯ ಸರ್ಕಾರದ 'ಗೃಹಲಕ್ಷ್ಮಿ' ಗ್ಯಾರಂಟಿ ಯೋಜನೆಯ ಫಲಾನುಭವಿಗಳು ಕಡ್ಡಾಯವಾಗಿ ಇ-ಕೆವೈಸಿ ಪರಿಷ್ಕರಿಸಬೇಕೆಂಬ ವದಂತಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಈ ಬಗ್ಗೆ ಸರ್ಕಾರದಿಂದ ಯಾವುದೇ ಅಧಿಕೃತ ಆದೇಶ ಬಂದಿಲ್ಲ. ವದಂತಿಗೆ ಕಿವಿಗೊಡಬಾರದೆಂದು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಮನವಿ ಮಾಡಿದ್ದಾರೆ.

ಫಲಾನುಭವಿಗಳು ಯಾವುದೇ ಕಾರಣಕ್ಕೂ ಸೈಬರ್ ಸೆಂಟರ್‌ಗಳಿಗೆ ಭೇಟಿ ನೀಡಿ ನೋಂದಣಿ ಮಾಡಿಸಿಕೊಳ್ಳುವ ಅಗತ್ಯವಿಲ್ಲ ಎಂದಿದ್ದಾರೆ. ಈಗಾಗಲೇ ನೋಂದಣಿಯಾಗಿರುವ ಫಲಾನುಭವಿಗಳಿಗೆ 2026ರ ಏಪ್ರಿಲ್ ತಿಂಗಳವರೆಗಿನ ಹಣವನ್ನು ಡಿ.ಬಿ.ಟಿ ಮೂಲಕ ಯಶಸ್ವಿಯಾಗಿ ಪಾವತಿಸಲಾಗಿದೆ. ಆದರೆ, ಸಾಮಾಜಿಕ ಮಾಧ್ಯಮಗಳಲ್ಲಿನ ತಪ್ಪು ಮಾಹಿತಿಯ ಆಧಾರದ ಮೇಲೆ, ಗೃಹಲಕ್ಷ್ಮಿ ಯೋಜನೆಯಡಿ ಇ-ಕೆವೈಸಿ ಅಪ್‌ಡೇಟ್ ಮಾಡಿಸಿಕೊಳ್ಳಬೇಕೆಂದು ನಂಬಿ ಹಲವು ಫಲಾನುಭವಿಗಳು ಖಾಸಗಿ ಸೈಬರ್ ಕೇಂದ್ರಗಳು, ಗ್ರಾಮ ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಿಗೆ ಮುಗಿಬೀಳುತ್ತಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿದೆ.

ಅಂತರಾಳದಿಂದ...
EDITORIAL

# ವಾಣಿಜ್ಯ ಹಡಗುಗಳ ಮೇಲೆ ದಾಳಿ ಯುದ್ಧನಿರತ ರಾಷ್ಟ್ರಗಳ ದುರ್ವರ್ತನೆ



ಮಧ್ಯಪ್ರಾಚ್ಯ ಸಂಘರ್ಷ ದಿನೇದಿನೆ ಉಲ್ಬಣಗೊಳ್ಳುತ್ತಲೇ ಇದೆ. ಅಮೆರಿಕ ಹಾಗೂ ಇರಾನ್ ನಡುವೇ ಈ ಕದನ ಎರಡೂ ರಾಷ್ಟ್ರಗಳಿಗೆ ಅಪಾರ ಹಾನಿ ಉಂಟುಮಾಡಿದ್ದರೂ ಇತ್ತಂಡಗಳು ತಮ್ಮ ಪಟ್ಟನ್ನು ಸಡಿಲಗೊಳಿಸುವ ಲಕ್ಷಣಗಳು ಕಾಣಿಸುತ್ತಿಲ್ಲ. ಈ ಯುದ್ಧದಿಂದಾಗಿ ಇಡೀ ಜಾಗತಿಕ ಸಮುದಾಯ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಕಚ್ಚಾ ತೈಲ, ಆಹಾರ, ಕೈಗಾರಿಕ ಉತ್ಪನ್ನಗಳ ಸಹಿತ ಎಲ್ಲ ತೆರನಾದ ಸರಕು ಸಾಗಣೆಗೆ ಬಲುದೊಡ್ಡ ತಡೆ ಎದುರಾಗಿದೆ. ಜಾಗತಿಕ ಪೂರೈಕೆ ಸರಪಳಿ ಮೇಲಿನ ಈ ಅಡಚಣೆಯಿಂದಾಗಿ ವಿಶ್ವ ರಾಷ್ಟ್ರಗಳು ಪರ್ಯಾಯ ಹಾದಿಯನ್ನು ಕಂಡುಕೊಳ್ಳಲು ಹರಸಾಹಸ ಪಡುತ್ತಿವೆಯಾದರೂ ಇವ್ಯಾವುವೂ ನಿರೀಕ್ಷಿತ ಫಲ ಕೊಟ್ಟಿಲ್ಲ. ಈ ಬೆಳವಣಿಗೆಗಳ ನಡುವೆ ಅಮೆರಿಕ ಮತ್ತು ಇರಾನ್ನ ಸಂಘರ್ಷ ಸಂಪೂರ್ಣ ಹಾದಿ ತಪ್ಪಿದ್ದು, ಸಾಗರ ಮಾರ್ಗಗಳಲ್ಲಿ ಸಂಚರಿಸುವ ವಾಣಿಜ್ಯ ಹಡಗುಗಳನ್ನು ಗುರಿಯಾಗಿಸಿ ದಾಳಿ ನಡೆಸುವ ಕಾರ್ಯದಲ್ಲಿ ನಿರತವಾಗಿವೆ. ಈ ಅತಿರೇಕದ ಹಾಗೂ ಅಮಾನವೀಯ ವರ್ತನೆಗೆ ಕಡಿವಾಣ ಹಾಕಲು ವಿಶ್ವರಾಷ್ಟ್ರಗಳು ಒಗ್ಗೂಡಿ ಅವುಗಳಿಗೆ ಬುದ್ಧಿವಾದ ಹೇಳುವ ಅನಿವಾರ್ಯತೆ ಎದುರಾಗಿದೆ.

ಈ ಯುದ್ಧ ಆರಂಭವಾದಾಗಿನಿಂದಲೂ ವಿದೇಶಿ ಹಡಗುಗಳನ್ನು ಗುರಿಯಾಗಿಸಿ ದಾಳಿಗಳನ್ನು ನಡೆಸುತ್ತಲೇ ಬರಲಾಗಿತ್ತು. ಈ ದಾಳಿಗಳಿಗೆ ಗುರಿಯಾದ ಹಡಗುಗಳಲ್ಲಿದ್ದ ಕೆಲವು ವಿದೇಶಿ ನಾವಿಕರು ಮೃತಪಟ್ಟಿದ್ದರೆ ಮತ್ತೆ ಕೆಲವರನ್ನು ಅಪಾಯದಿಂದ ಪಾರು ಮಾಡಲಾಗಿತ್ತು. ಅಮೆರಿಕ-ಇರಾನ್‌ನ ಈ ದಾಳಿಗಳನ್ನು ಭಾರತ ಸಹಿತ ವಿಶ್ವದ ಹಲವು ರಾಷ್ಟ್ರಗಳು ಬಲವಾಗಿ ಖಂಡಿಸಿದ್ದವಲ್ಲದೆ ವಿಶ್ವಸಂಸ್ಥೆಯ ಭದ್ರತ ಮಂಡಳಿ ಸಹಿತ ವಿವಿಧ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಪ್ರಬಲ ಆಕ್ಷೇಪ ವ್ಯಕ್ತಪಡಿಸುತ್ತಲೇ ಬಂದಿದ್ದವು.

ಇದರ ಹೊರತಾಗಿಯೂ ಎರಡೂ ರಾಷ್ಟ್ರಗಳು ಸಾಗರ ಪ್ರದೇಶದಲ್ಲಿ ಸಂಚರಿಸುತ್ತಿರುವ ವಾಣಿಜ್ಯ ಹಡಗುಗಳನ್ನು ಗುರಿಯಾಗಿಸಿ ದಾಳಿಗಳನ್ನು ನಡೆಸಲಾರಂಭಿಸಿರುವುದು ವಿಪರ್ಯಾಸ ರವಿವಾರ ಮುಂಜಾನೆ ಒಮಾನ್ ಕರಾವಳಿಯಲ್ಲಿ ಜಿಎಫ್‌ಎಸ್ ಗ್ಯಾಲಕ್ಸಿ ವಾಣಿಜ್ಯ ಹಡಗನ್ನು ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ. ಈ ಹಡಗಿನಲ್ಲಿ 11 ಮಂದಿ ಭಾರತೀಯರಿದ್ದರೆನ್ನಲಾಗಿದ್ದು, ಈ ಪೈಕಿ ಹತ್ತು ಮಂದಿಯನ್ನು ರಕ್ಷಿಸಲಾಗಿದ್ದರೆ, ಓರ್ವ ನಾಪತ್ತೆಯಾಗಿದ್ದಾನೆ.

ಇರಾನ್ ದಾಳಿಯನ್ನು ಭಾರತ ಅತ್ಯುಗ್ರವಾಗಿ ಖಂಡಿಸಿದ್ದಲ್ಲದೆ ಸಾಗರ ಪ್ರದೇಶದಲ್ಲಿನ ಭದ್ರತೆ ಮತ್ತು ವಾಣಿಜ್ಯ ನೌಕೆಗಳ ಸುಗಮ ಸಂಚಾರವನ್ನು ಖಾತರಿಪಡಿಸುವುದು ವಿಶ್ವರಾಷ್ಟ್ರಗಳ ಸಾಮೂಹಿಕ ಹೊಣೆಗಾರಿಕೆ ಎಂಬುದನ್ನು ಮರೆಯಬಾರದು ಎಂದು ಯುದ್ಧನಿರತ ರಾಷ್ಟ್ರಗಳಿಗೆ ಜ್ಞಾಪಿಸಿದೆ. ಮಧ್ಯಪ್ರಾಚ್ಯ ಮತ್ತು ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಶಾಂತಿ ಹಾಗೂ ಸ್ಥಿರತೆಯನ್ನು ಪುನಃಸ್ಥಾಪಿಸಲು ಜಾಗತಿಕ ಸಮುದಾಯ ಒಗ್ಗೂಡಿ ಎರಡೂ ರಾಷ್ಟ್ರಗಳ ಮೇಲೆ ತೀವ್ರ ತೆರನಾದ ಒತ್ತಡ ಹೇರುವ ತುರ್ತು ಅಗತ್ಯವಿದೆ.

## ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕದ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿ

ಅಮೆರಿಕ ಹಾಗೂ ಇರಾನ್ ನಡುವೆ ಕದನ ವಿರಾಮ ಏರ್ಪಟ್ಟು ಇನ್ನೇನು ಯುದ್ಧ ಸ್ಥಗಿತಗೊಂಡು ಜಾಗತಿಕವಾಗಿ ಪರಿಸ್ಥಿತಿ ಸಹಜಸ್ಥಿತಿಗೆ ಮರಳುತ್ತಿದೆ ಎನ್ನುವಷ್ಟರಲ್ಲಿ ಅಮೆರಿಕ-ಇರಾನ್ ಮತ್ತೆ ದಾಳಿ-ಪ್ರತಿದಾಳಿಗಳಲ್ಲಿ ತೊಡಗಿಕೊಂಡಿವೆ. ಹೊರ್ಮುಜ್ ಜಲಸಂಧಿ ಮೇಲೆ ನಿಯಂತ್ರಣ ಸಾಧಿಸುವ ಸಂಬಂಧ ಎರಡೂ ರಾಷ್ಟ್ರಗಳು ಸಮರವನ್ನು ತೀವ್ರಗೊಳಿಸಿವೆ.

ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆ ಹಡಗುಗಳಿಗೆ ಪದೇಪದೆ ತಡೆ ಒಡ್ಡುತ್ತಿರುವ ಇರಾನ್ ಧೋರಣೆಗೆ ಪ್ರತಿಯಾಗಿ ಅಮೆರಿಕವು ಇರಾನ್ ಆಯಕಟ್ಟಿನ ಸ್ಥಳಗಳನ್ನು ಗುರಿಯಾಗಿಸಿ ವಾಯುದಾಳಿಗಳನ್ನು ನಡೆಸುತ್ತಲೇ ಬಂದಿದೆ.

ಇದಕ್ಕೆ ಪ್ರತೀಕಾರವಾಗಿ ಇರಾನ್ ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕದ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿಗಳನ್ನು ತೀವ್ರಗೊಳಿಸಿದೆ. ಈ ದಾಳಿ-ಪ್ರತಿದಾಳಿಗಳ ನಡುವೆ ಸಾಗರ ಮಾರ್ಗದಲ್ಲಿನ ವಾಣಿಜ್ಯ ಹಡಗುಗಳನ್ನು ಗುರಿಯಾಗಿಸಿ ಇತ್ತಂಡಗಳು ದಾಳಿ ನಡೆಸುವ ತನ್ನ ಹಳೆಯ ಚಾಳಿಯನ್ನು ಮುಂದುವರಿಸಿವೆ.

# ನಿಮ್ಮ ಯಕೃತ್ತು ನಿರ್ವಿಷಗೊಳಿಸಲು ಈ ಹಣ್ಣುಗಳು ಅತ್ಯುತ್ತಮ: ಇವೇ ನೋಡಿ ಸೂಪರ್ ಫ್ರೂಟ್ಸ್!



ಯಕೃತ್ತು ನಮ್ಮ ದೇಹದ ಅತ್ಯಂತ ಪ್ರಮುಖ ಅಂಗಗಳಲ್ಲಿ ಒಂದಾಗಿದೆ. ಇದು ದಿನವಿಡೀ ನಿರಂತರವಾಗಿ ಕೆಲಸ ಮಾಡುತ್ತದೆ. ಆಹಾರವನ್ನು ಜೀರ್ಣಿಸಿಕೊಳ್ಳಲು ಬಹುದೊಡ್ಡ ಪಾತ್ರವನ್ನು ವಹಿಸುತ್ತದೆ. ಶಕ್ತಿಯನ್ನು ಉತ್ಪಾದಿಸುತ್ತದೆ ಹಾಗೂ ಪೋಷಕಾಂಶಗಳನ್ನು ಸಂಗ್ರಹಿಸುತ್ತದೆ. ಮುಖ್ಯವಾಗಿ ಇದು ರಕ್ತದಿಂದ ವಿಷವನ್ನು ಶೋಧಿಸುತ್ತದೆ. ಬದಲಾಗುತ್ತಿರುವ ಜೀವನಶೈಲಿ ಮತ್ತು ಆಹಾರ ಕ್ರಮಗಳು ಯಕೃತ್ತಿನ ಆರೋಗ್ಯವನ್ನು ಅಪಾಯಕ್ಕೆ ಸಿಲುಕಿಸುತ್ತಿವೆ ಎಂದು ಆರೋಗ್ಯ ತಜ್ಞರು ತಿಳಿಸುತ್ತಾರೆ.

ಇದರಿಂದ ಯಕೃತ್ತಿನಲ್ಲಿ ತ್ಯಾಜ್ಯ ಮತ್ತು ಕೊಬ್ಬಿನ ಕ್ರಮೇಣ ಶೇಖರಣೆಗೆ ಕಾರಣವಾಗುತ್ತದೆ. ಪರಿಣಾಮವಾಗಿ ಯಕೃತ್ತಿನ ಕಾರ್ಯವು ದುರ್ಬಲಗೊಳ್ಳುತ್ತದೆ. ಇದು ನಮ್ಮ ಜೀರ್ಣಾಂಗ ವ್ಯವಸ್ಥೆಯ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಅನಿಲ, ಆಮ್ಲೀಯತೆ, ಉಬ್ಬುವುದು ಹಾಗೂ ಮಲಬದ್ಧತೆಯಂತಹ ಸಮಸ್ಯೆಗಳನ್ನು ಉಂಟುಮಾಡುತ್ತದೆ. ನಿಮ್ಮ ದೈನಂದಿನ ಆಹಾರದಲ್ಲಿ ಕೆಲವು ಹಣ್ಣುಗಳನ್ನು ಸೇರಿಸುವುದರಿಂದ ಯಕೃತ್ತನ್ನು ನಿರ್ವಿಷಗೊಳಿಸಲು ಸಹಾಯ ಮಾಡುತ್ತದೆ. ಆ ಸೂಪರ್ ಹಣ್ಣಗಳು ಯಾವುವು ಎಂಬುದನ್ನು ತಿಳಿಯೋಣ. ಕಿತ್ತಳೆ, ಮೂಸಂಬಿ ಹಾಗೂ ನಿಂಬೆಹಣ್ಣುಗಳಂತಹ ಸಿಟ್ರಸ್ ಹಣ್ಣುಗಳು ಯಕೃತ್ತಿನ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿವೆ. ಈ ಹಣ್ಣುಗಳಲ್ಲಿ ವಿಟಮಿನ್ ಸಿ ಹಾಗೂ ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿವೆ. ಇದು ಯಕೃತ್ತಿನ ಕೋಶಗಳನ್ನು ಹಾನಿಕಾರಕ ಸ್ವತಂತ್ರ ರಾಡಿಕಲ್‌ಗಳಿಂದ ಉಂಟಾಗುವ ಹಾನಿಯಿಂದ ರಕ್ಷಿಸುತ್ತದೆ. ಇದಲ್ಲದೇ, ವಿಟಮಿನ್ ಸಿ ದೇಹವು ಗ್ಲುಟಾಥಿಯೋನ್ ಎಂಬ ಸಂಯುಕ್ತದ ಉತ್ಪಾದನೆ ಉತ್ತೇಜಿಸುತ್ತದೆ, ಇದು ಯಕೃತ್ತನ್ನು ನಿರ್ವಿಷಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ಸಿಟ್ರಸ್ ಹಣ್ಣುಗಳು ಯಕೃತ್ತಿನ ಹಾನಿಯನ್ನು ಕಡಿಮೆ ಮಾಡುತ್ತದೆ ಎಂದು ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್ ಹೇಳುತ್ತದೆ. ದಿನಕ್ಕೊಂದು ಸೇಬು ವೈದ್ಯರನ್ನು ದೂರವಿಡುತ್ತದೆ' ಎಂಬ ಮಾತು ಯಕೃತ್ತಿನ ಆರೋಗ್ಯಕ್ಕೂ ಅನ್ವಯಿಸುತ್ತದೆ. ಸೇಬಿನಲ್ಲಿ ಪೆಕ್ಟಿನ್ ಎಂಬ ಕರಗುವ ಫೈಬರ್ ಇರುತ್ತದೆ. ಇದ ಜೀರ್ಣಾಂಗದಲ್ಲಿ ವಿಷ ಹಾಗೂ ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಸಹಾಯವಾಗಿಸುತ್ತದೆ. ಇದು ಯಕೃತ್ತಿನ ಮೇಲಿನ ಕೆಲಸದ ಹೊರೆಯನ್ನು ಕಡಿಮೆ ಮಾಡುತ್ತದೆ. ಸೇಬಿನ ಸೇವನೆಯು ಯಕೃತ್ತಿನಲ್ಲಿ ಉತ್ಕರ್ಷಣ ನಿರೋಧಕ ಕಿಣ್ವ ಚಟುವಟಿಕೆಯನ್ನು ಹೆಚ್ಚಿಸುತ್ತದೆ. ಉರಿಯೂತದ ಸೈಟೋಕಿನ್‌ಗಳ ಮಟ್ಟವನ್ನು ಕಡಿಮೆ ಮಾಡುತ್ತದೆ ಎಂದು ವರದಿ ತಿಳಿಸುತ್ತದೆ. ಪಪ್ಪಾಯಿಯಲ್ಲಿ 'ಪಪೈನ್' ಮತ್ತು 'ಕೈಮೊಪಪೈನ್' ಎಂದು ಕರೆಯಲ್ಪಡುವ ಪ್ರಬಲ ಜೀರ್ಣಕಾರಿ ಕಿಣ್ವಗಳಿವೆ. ಈ ಕಿಣ್ವಗಳು ಪ್ರೋಟೀನ್‌ಗಳನ್ನು ಒಡೆಯಲು, ಜೀರ್ಣಕ್ರಿಯೆ ಸುಧಾರಿಸಲು ಸಹಾಯ ಮಾಡುತ್ತದೆ. ಇದರಿಂದಾಗಿ ಮಲಬದ್ಧತೆಯನ್ನು ತಡೆಯುತ್ತದೆ. ಇದು ಯಕೃತ್ತಿನ ಮೇಲಿನ ವಿಷಕಾರಿ ಹೊರೆಯನ್ನು ಕಡಿಮೆ ಮಾಡುತ್ತದೆ. ಪಪ್ಪಾಯಿಯಲ್ಲಿರುವ ಉತ್ಕರ್ಷಣ ನಿರೋಧಕಗಳು ಯಕೃತ್ತಿನ ಉರಿಯೂತ ತಗ್ಗಿಸಲು ತುಂಬಾ ಸಹಾಯ ಮಾಡುತ್ತದೆ ಎಂದು ತಜ್ಞರು ಹೇಳುತ್ತಾರೆ.

ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್ ಪಪ್ಪಾಯಿಯನ್ನು (ಆಲ್ಕೊಹಾಲ್ಯುಕ್ತವಲ್ಲದ ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆ) ತಡೆಗಟ್ಟುವಿಕೆ ಇಲ್ಲವೇ ಚಿಕಿತ್ಸೆಗೆ ಪರಿಣಾಮಕಾರಿ ಹಣ್ಣು ಎಂದು ತಿಳಿಸುತ್ತದೆ. ಗಾತ್ರದಲ್ಲಿ ಚಿಕ್ಕದಾಗಿದ್ದರೂ ಕಿವಿ ಹಣ್ಣು ಪೋಷಕಾಂಶಗಳ ಶಕ್ತಿ ಕೇಂದ್ರವಾಗಿದೆ. ಕಿವಿ ಹಣ್ಣನ್ನು ವಿಟಮಿನ್ ಸಿ, ವಿಟಮಿನ್ ಇ ಮತ್ತು ಉತ್ಕರ್ಷಣ ನಿರೋಧಕಗಳ ಅತ್ಯುತ್ತಮ ಮೂಲ ಎಂದು ವಿವರಿಸುತ್ತಾರೆ. ಇದು ಯಕೃತ್ತನ್ನು ಆಕ್ಸಿಡೇಟಿವ್ ಒತ್ತಡದಿಂದ ರಕ್ಷಿಸಲು ಸಹಾಯ ಮಾಡುತ್ತದೆ. ಕಿವಿಯಲ್ಲಿರುವ ಫೈಬರ್ ಆರೋಗ್ಯಕರ ಜೀರ್ಣಕ್ರಿಯೆಯನ್ನು ಉತ್ತೇಜಿಸುತ್ತದೆ. ಇದಲ್ಲದೇ, ಇದು ಆರೋಗ್ಯಕರ ಯಕೃತ್ತನ್ನು ಕಾಪಾಡಿಕೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ತಜ್ಞರು ವಿವರಿಸುತ್ತಾರೆ.

# ಮೂಳೆಗಳನ್ನು ಗಟ್ಟಿ ಮಾಡುವ ಬ್ರಹ್ಮಾಸ್ತ್ರ! ಇದು ಸಾಮಾನ್ಯ ಗಿಡವಲ್ಲ, ಹಲವು ರೋಗಗಳಿಗೆ ದಿವ್ಯೌಷಧ

ಆಯುರ್ವೇದದಲ್ಲಿ ಕೆಲವು ಗಿಡ-ಮೂಲಿಕೆಗಳು ಬಹಳ ಮುಖ್ಯವಾಗಿವೆ. ಅವುಗಳಲ್ಲಿ ಒಂದು ಗಿಡವು ನಮ್ಮ ಮೂಳೆಗಳನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದು ಸಾಮಾನ್ಯ ಸಸ್ಯವಲ್ಲ, ಬದಲಿಗೆ ಅನೇಕ ಆರೋಗ್ಯ ಪ್ರಯೋಜನಗಳನ್ನು ನೀಡುವ ಔಷಧೀಯ ಗುಣಗಳ ಖಜಾನೆ ಎಂದು ಹೇಳಲಾಗುತ್ತದೆ. ಹಳೆಯ ಕಾಲದಿಂದಲೂ ಸಾಂಪ್ರದಾಯಿಕ ಔಷಧದಲ್ಲಿ ಹಲವು ಕಾಯಿಲೆಗಳ ಚಿಕಿತ್ಸೆಗೆ ಈ ಗಿಡವನ್ನು ಬಳಸುತ್ತಿದ್ದಾರೆ.

ಈ ಗಿಡ ಬೇರೆ ಯಾವುದೂ ಅಲ್ಲ, ಮಂಗರವಳ್ಳಿ ಅಥವಾ ಸಂದುಬಳ್ಳಿ. ಇದು ಬಹುತೇಕ ಮನೆಗಳಲ್ಲಿ ಇರುತ್ತದೆ. ಮಂಗರವಳ್ಳಿ ಗಿಡದಲ್ಲಿ ಕ್ಯಾಲ್ಸಿಯಂ ಮತ್ತು ವಿಟಮಿನ್ ಸಿ ನಂತಹ ಪೋಷಕಾಂಶಗಳು ಹೇರಳವಾಗಿವೆ. ಇದು ಮೂಳೆಗಳ ಆರೋಗ್ಯಕ್ಕೆ ಬಹಳ ಉಪಯುಕ್ತವಾಗಿದೆ. ಮಂಗರವಳ್ಳಿ ಗಿಡವು



ನಮ್ಮ ಹೊಟ್ಟೆಯ ಜೀರ್ಣಕ್ರಿಯೆಯನ್ನು ಚೆನ್ನಾಗಿ ಕೆಲಸ ಮಾಡಲು ಸಹಾಯ ಮಾಡುತ್ತದೆ. ಇದರಲ್ಲಿ ಫೈಬರ್ ಹೆಚ್ಚಾಗಿರುವುದರಿಂದ ಅಜೀರ್ಣ ಮತ್ತು ಮಲಬದ್ಧತೆಯ ಸಮಸ್ಯೆಗಳು ಕಡಿಮೆಯಾಗುತ್ತವೆ ಮತ್ತು ಆಹಾರ ಸುಲಭವಾಗಿ ಜೀರ್ಣವಾಗುತ್ತದೆ. ಇದಲ್ಲದೆ, ಕೆಲವು ಅಧ್ಯಯನಗಳ ಪ್ರಕಾರ ಮಧುಮೇಹ ರೋಗಿಗಳಲ್ಲಿ ರಕ್ತದ ಸಕ್ಕರೆಯ ಮಟ್ಟವನ್ನು ನಿಯಂತ್ರಿಸಲು ಇದು ಸಹಾಯಕವಾಗುತ್ತದೆ ಎಂದು ವರದಿಯಾಗಿದೆ.

ಮಂಗರವಳ್ಳಿ ಗಿಡದಲ್ಲಿ ವಿಟಮಿನ್ಸ್, ಮಿನರಲ್ಸ್ ಮತ್ತು ಉತ್ಕರ್ಷಣ ನಿರೋಧಕಗಳು (ಆಂಟಿಆಕ್ಸಿಡೆಂಟ್‌ಗಳು) ಹೇರಳವಾಗಿವೆ. ಇವು ದೇಹಕ್ಕೆ ಶಕ್ತಿ ನೀಡುತ್ತವೆ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ. ಇದನ್ನು ಬಳಸುವುದರಿಂದ ಯಾವುದೇ ಚಿಕ್ಕಪುಟ್ಟ ಆರೋಗ್ಯ ಸಮಸ್ಯೆ ಎದುರಾಗುವುದಿಲ್ಲ. ಮಹಿಳೆಯರ ಸಮಸ್ಯೆಗಳನ್ನು ನಿಯಂತ್ರಿಸಲು ಮಂಗರವಳ್ಳಿ ಗಿಡ ಉಪಯುಕ್ತವಾಗಿದೆ. ಋತುಬಂಧದ ಸಮಯದಲ್ಲಿ ಮುಟ್ಟಿನ ನೋವು ಮತ್ತು ಮೂಳೆಗಳ ದುರ್ಬಲತೆಯನ್ನು ಕಡಿಮೆ ಮಾಡುತ್ತದೆ ಎಂದು ವರದಿ ಹೇಳಿದೆ.

ಮಂಗರವಳ್ಳಿ ಗಿಡವನ್ನು ಸರಿಯಾಗಿ ಬಳಸಿದರೆ ಅನೇಕ ಆರೋಗ್ಯ ಪ್ರಯೋಜನಗಳು ಸಿಗುತ್ತವೆ ಎಂದು ವರದಿ ಸೂಚನೆ ನೀಡುತ್ತದೆ. ಹೀಗಾಗಿ ಮಂಗರವಳ್ಳಿ ಗಿಡವನ್ನು ಬಳಸುವ ವಿಧಾನದ ಬಗ್ಗೆ ತಿಳಿದುಕೊಳ್ಳೋಣ ಬನ್ನಿ. ಮಂಗರವಳ್ಳಿ ಗಿಡದ ಕಾಂಡಗಳನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ ಚಟ್ನಿ ಮಾಡಿ ಅಥವಾ ರೊಟ್ಟಿಯೊಂದಿಗೆ ತಿನ್ನಬಹುದು.

ಆಯುರ್ವೇದ ತಜ್ಞರು ಇದನ್ನು ಹೆಚ್ಚು ಬಳಸದೆ, ಸೀಮಿತ ಪ್ರಮಾಣದಲ್ಲಿ ಮಾತ್ರ ಬಳಸುವುದು ಉತ್ತಮ ಎಂದು ಸಲಹೆ ನೀಡುತ್ತಾರೆ. ಆದರೆ ಇದು ಕೇವಲ ಮಾಹಿತಿಗಾಗಿ ಮಾತ್ರ.

# ಮಳೆಯ ಚಳಿಗೆ ಬಿಸಿ ಬಿಸಿ ಪಾಲಕ್ ಸೂಪ್! ಬೆಳಗಿನ ಉಪಾಹಾರಕ್ಕೆ ಮನೆಯಲ್ಲೇ ಮಾಡಿ,

ಮಳೆಯಲ್ಲಿ ನೆನೆದ ನಂತರ ಹಲವು ಜನರು ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಆದ್ದರಿಂದ, ನಿಮ್ಮ ದೈನಂದಿನ ಡಯಟ್‌ನಲ್ಲಿ ಆರೋಗ್ಯಕ್ಕೆ ಒಳ್ಳೆಯ ಆಹಾರಗಳನ್ನು ಸೇರಿಸಿ. ಇದರಲ್ಲಿ ಪಾಲಕ್ ಸೂಪ್ ಅನ್ನೂ ಸೇರಿಸಬಹುದು.

ಏಕೆಂದರೆ ಪಾಲಕ್ ತುಂಬಾ ಆರೋಗ್ಯಕರ ತರಕಾರಿ ಇದರಿಂದ ಮಾಡುವ ಸೂಪ್ ರೆಡಿಮೇಡ್ ಸೂಪ್‌ಗಿಂತ ಬೆಸ್ಟ್. ಪಾಲಕ್ ಸೂಪ್ ಅನ್ನು ಸ್ವಲ್ಪ ಜನರು ಇಷ್ಟಪಡುತ್ತಾರೆ. ಆದರೆ ಸರಿಯಾಗಿ ತಯಾರಿಸಿದರೆ ಅದು ಬಹಳ ರುಚಿಕರವಾದ ಸೂಪ್ ಆಗುತ್ತದೆ.

ನೀವು ಅದಕ್ಕೆ ನಿಮ್ಮ ಮೆಚ್ಚಿನ ಪದಾರ್ಥಗಳನ್ನು ಸೇರಿಸಬಹುದು. ಪಾಲಕ್ ಸೂಪ್‌ನಲ್ಲಿ ಕಬ್ಬಿಣ, ವಿಟಮಿನ್ ಮತ್ತು ಆಂಟಿಆಕ್ಸಿಡೆಂಟ್‌ಗಳು ಸಾಕಷ್ಟು ಇವೆ.

ಇದು ತೂಕ ಕಡಿಮೆ ಮಾಡಲು, ದೇಹದ ರೋಗನಿರೋಧಕ ಶಕ್ತಿ ಹೆಚ್ಚಿಸಲು, ಕಣ್ಣು ಮತ್ತು ಹೃದಯದ ಆರೋಗ್ಯ ಸುಧಾರಿಸಲು, ಜೀರ್ಣಕ್ರಿಯೆಗೆ ಸಹಾಯ ಮಾಡಲು ಮತ್ತು ರಕ್ತಹೀನತೆಯನ್ನು ತಡೆಯಲು ಬಹಳ ಒಳ್ಳೆಯದು. ಹೀಗಾಗಿ ಮನೆಯಲ್ಲಿಯೇ ಬೆಳಗಿನ ಉಪಾಹಾರಕ್ಕೆ ಮಾಡಬಹುದಾದ ರುಚಿಕರವಾದ ಪಾಲಕ್ ಸೂಪ್ ರೆಸಿಪಿ ಇಲ್ಲಿದೆ.

ಈರುಳ್ಳಿ - 1 ಸಣ್ಣ ಈರುಳ್ಳಿ (ಕತ್ತರಿಸಿದ) ಬೆಳ್ಳುಳ್ಳಿ ಎಸಳು - 4 ಶುಂಠಿ - 1 ಸಣ್ಣ ತುಂಡು ಆಲಿವ್ ಎಣ್ಣೆ - 1 ಚಮಚ ತುಪ್ಪ ತರಕಾರಿ ಸಾರು - 2 ಕಪ್ ನೀರು ಅಥವಾ ಉಪ್ಪು - ರುಚಿಗೆ ತಕ್ಕಷ್ಟು ಕಪ್ಪು ಮೆಣಸಿನ ಪುಡಿ - ಅರ್ಧ ಟೀಚಮಚ ನಿಂಬೆ ರಸ - ಅರ್ಧ ಟೀಚಮಚ ಈಗ ಪಾಲಕ್ ಸೊಪ್ಪು ಸೇರಿಸಿ 5 ನಿಮಿಷ ಬೇಯಿಸಿ.

ನಂತರ ಸ್ವಲ್ಪ ನೀರು ಹಾಕಿ ಮತ್ತೆ 5 ನಿಮಿಷ ಕುದಿಸಿ.

ಮಿಶ್ರಣವನ್ನು ಸ್ವಲ್ಪ ತಣ್ಣಗಾಗಿಸಿ ಮಿಕ್ಸರ್‌ನಲ್ಲಿ ರುಬ್ಬಿಕೊಳ್ಳಿ. ಬಿಸಿ ಬಿಸಿಯಾಗಿ ಸವಿಯಿರಿ.

# ಭೂ ಕುಸಿತ- ಹೆಚ್ಚಿಸುತ್ತಿದೆ ಎದೆಬಡಿತ

ಕಳೆದ ಏಳು ವರ್ಷಗಳ ಹಿಂದೆ, 2019ರ ಆಗಸ್ಟ್ 10ರ ರಾತ್ರಿ....


ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಸುರಿದ ಧಾರಾಕಾರ ಮಳೆಗೆ ತೀರ್ಥಹಳ್ಳಿ ತಾಲ್ಲೂಕಿನ ಶೆಟ್ಟಿಹಳ್ಳಿ ಅಭಯಾರಣ್ಯ ವ್ಯಾಪ್ತಿಯ, ಮಂಡಗದ್ದೆ ಹೋಬಳಿಯ ಹೆಗಲತ್ತಿ ಗ್ರಾಮದ ಮಲೆ ಮಹದೇಶ್ವರ ದೇವರ ಗುಡ್ಡ ಕೃಷಿ ಜಮೀನಿನ ಮೇಲೆ ಜರಿದಿತ್ತು. ಇದರಿಂದಾಗಿ ಭತ್ತದ ಗದ್ದೆಗಳು, ಅಡಿಕೆ ತೋಟ, ಕುಡಿಯುವ ನೀರಿನ ಬಾವಿ, ಪಂಪ್‌ಸೆಟ್, ಕೃಷಿ ಪರಿಕರಗಳು ಗುಡ್ಡದ ಮಣ್ಣಿನಲ್ಲಿ ಹಳ್ಳವಾಗಿ ಹರಿದು ಗ್ರಾಮದ ಜನರ ಬದುಕನ್ನು ಕಸಿದುಕೊಂಡಿತ್ತು.

ಕೇರಳಂ ರಾಜ್ಯದ ವಯನಾಡಿನಲ್ಲಿ ಕಳೆದ ವಾರ ನಡೆದ ಭೂ ಕುಸಿತ ಕರುನಾಡಿಗೂ ಕಂಪನ ಹುಟ್ಟಿಸಿದೆ. ಅದರಲ್ಲೂ ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಜನರಿಗೆ ಆತಂಕ ಮೂಡಿಸಿದೆ. ದೇಶದ ವಿವಿಧೆಡೆ ಭೂಕುಸಿತದ ಪ್ರಕರಣಗಳು ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದಂತೆಯೇ ಹೆಗಲತ್ತಿ ಗ್ರಾಮದಲ್ಲಿ ಏಳು ವರ್ಷಗಳು ಹಿಂದೆ ನಡೆದ ಭೀಕರ ಭೂಕುಸಿತದ ದುರ್ಘಟನೆ ಮನದ ಪಣದಲ್ಲಿ ಹಾದು ಹೋಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಇಂತಹ ಭೂಕುಸಿತಗಳು ಹೆಚ್ಚುತ್ತಿವೆ. ಶಿವಮೊಗ್ಗದ ಹುಲಿಕಲ್ ಘಾಟ್ ಮತ್ತು ಉತ್ತರ ಕನ್ನಡದ ಶಿರೂರು ದುರಂತಗಳು ಇಡೀ ಮಲೆನಾಡಿನ ಜನರನ್ನು ಬೆಚ್ಚಿಬೀಳಿಸಿವೆ. ಈ ನಡುವೆ ಕೇರಳಂನ ವಯನಾಡಿನಲ್ಲಿ ಮತ್ತೆ ಭೂ ಕುಸಿತ ಸಂಭವಿಸಿದೆ. ಪಾಪಿ ಪರದೇಶಿಗಳು ಜೀವ ಕಳೆದುಕೊಂಡಿದ್ದಾರೆ. ಇದರೊಂದಿಗೆ ಅದೆಷ್ಟು ವನ್ಯಜೀವಿಗಳು ಪ್ರಾಣ ಕಳೆದುಕೊಂಡಿವೆಯೋ. ಜೊತೆಗೆ ಲೆಕ್ಕವಿಲ್ಲದಷ್ಟು ಗಿಡ ಮರಗಳು ಮಣ್ಣಾಗಿ ಹೋದವೋ ಕೇಳುವವರ್ಯಾರು?

2024ರಲ್ಲಿ ಸಂಭವಿಸಿದ್ದ ಅದೇ ಮೆಪ್ಪಾಡಿ ಪಂಚಾಯಿತಿ ವ್ಯಾಪ್ತಿಯಲ್ಲಿಯೇ ಮತ್ತೆ ಸಂಭವಿಸಿರುವ ಈ ದುರಂತಕ್ಕೆ ಅಯೋಗ್ಯ ಸರ್ಕಾರಗಳೇ ಕಾರಣವೇ ಹೊರತು ಪ್ರಕೃತಿಯಲ್ಲ. ಕೇರಳದ ಮಂತ್ರಿ ಸಿದ್ದೀಕ್ ಕೂಡಾ ಅದನ್ನೇ ಹೇಳಿದ್ದಾರೆ. ಈ ಪ್ರದೇಶದಲ್ಲಿ ಮತ್ತೆ ಭೂ ಕುಸಿತ ಸಂಭವಿಸುವ ಸಾಧ್ಯತೆಗಳಿವೆ ಎಂದು ಭೂ ವಿಜ್ಞಾನಿಗಳು ಎಚ್ಚರಿಸಿದ ಮೇಲೂ ಮತ್ತದೇ ಅತಿ ಸೂಕ್ಷ್ಮ ಪ್ರದೇಶದಲ್ಲಿ ಸುರಂಗ ಮಾಡಲು ಹೊರಡುತ್ತಾರೆಂದರೆ ನಿರ್ಮಾಣ ಲಾಬಿಯು ಯಾವ ಮಟ್ಟಿಗೆ ಸರ್ಕಾರದ ಮೇಲೆ ಸವಾರಿ ಮಾಡುತ್ತಿರಬಹುದು ಎಂಬುದನ್ನು ಊಹಿಸಿ ನೋಡಿ. ಸಾಕ್ಷರತೆಯಲ್ಲಿ ಭಾರತದಲ್ಲಿ ಪ್ರಥಮ ಸ್ಥಾನದಲ್ಲಿರುವ ಕೇರಳಂನಲ್ಲಿ ಪರಿಸ್ಥಿತಿ ಹೀಗಿದೆ ಎಂದರೆ ಇದು ನಾಚಿಕೆಗೇಡು. ವಿನಾಶ ಕಾಲಕ್ಕೆ ವಿಪರೀತ ಬುದ್ಧಿ ಎಂಬಂತೆ ನಮ್ಮ ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟದ ದಟ್ಟ ಕಾಡನ್ನು ನಾಶ ಮಾಡಿ ಬರೋಬ್ಬರಿ ಏಳು ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಸರ್ವ ಋತು ಜೋಗದ ಪರಿಸರದಲ್ಲಿ ಕೆಲವು ವರ್ಷಗಳಿಂದ ಬೃಹತ್ ಕಾಮಗಾರಿ ನಡೆಯುತ್ತಿದೆ. ಲಿಂಗನಮಕ್ಕಿಯಿಂದ ಬೆಂಗಳೂರಿಗೆ ನೀರು, ನದಿ ತಿರುವು, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ... ಹೀಗೆ ಹಲವಾರು ಯೋಜನೆಗಳು ಕಾದು ಕುಳಿತಿವೆ.


ಅಲ್ಲದೆ ಆಗುಂಬೆ ಭಾಗದಲ್ಲಿ ಸುರಂಗ ಮಾರ್ಗ ನಿರ್ಮಿಸಲು ಭರದಿಂದ ಸಿದ್ಧತೆಗಳು ನಡೆಯುತ್ತಿವೆ. ಶಿವಮೊಗ್ಗ- ಶೃಂಗೇರಿ- ದಕ್ಷಿಣ ಕನ್ನಡ ರೈಲು ಮಾರ್ಗ ಯೋಜನೆ ಅನುಷ್ಠಾನಕ್ಕೆ ಸಿದ್ಧವಾಗಿದೆ.

ಹೀಗೆ ಹಲವು ಯೋಜನೆಗಳು ಪಶ್ಚಿಮ ಘಟ್ಟಕ್ಕೆ ಗಂಡಾಂತರ ತರುತ್ತಿದೆ. ಅಸಂಬದ್ಧ,



ಅವೈಜ್ಞಾನಿಕ ಯೋಜನೆಗಳನ್ನು ದರ್ಪ, ದಬ್ಬಾಳಿಕೆಗಳಿಂದ ಮಾಡುತ್ತಾ ಬಂದ ನಮ್ಮನ್ನು ಆಳುವ ದರಿದ್ರ ರಾಜಕೀಯ ವ್ಯವಸ್ಥೆ ಕೋಟಿ- ಕೋಟಿ ಹಣ ಲೂಟಿಗಾಗಿ ಅಭಿವೃದ್ಧಿ ಎಂಬ ನೆಪದಲ್ಲಿ ಅಸಮರ್ಪಕ ಯೋಜನೆಗಳನ್ನು ಮಾಡುತ್ತಾ ಇಡೀ ಪ್ರಕೃತಿಯನ್ನೇ ಮುಕ್ಕಿ ತಿನ್ನುತ್ತಿದೆ. ಆದರೆ ಜನತೆ ಮೌನವಾಗಿ ಇದನ್ನೆಲ್ಲಾ ಮೂಕ ಪ್ರೇಕ್ಷಕರಂತೆ ನೋಡುತ್ತಾ ಮತ್ತೆ, ಮತ್ತೆ ಅಂತಹ ದರಿದ್ರ ರಾಜಕಾರಣಿಗಳಿಗೆ ಮತ ನೀಡಿ ಇಡೀ ವ್ಯವಸ್ಥೆಯನ್ನೇ ಛಿದ್ರಗೊಳಿಸುವ ಅಸಹಾಯಕ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈ ಪರಿಸ್ಥಿತಿಯಲ್ಲಿ ಪಶ್ಚಿಮ ಘಟ್ಟಗಳಿಗೆ ಘಾಸಿ ಮಾಡುವ ಮಾನವ ನಿರ್ಮಿತ ಅವೈಜ್ಞಾನಿಕ ಯೋಜನೆಗಳನ್ನು ಸರ್ಕಾರ ಕೈಬಿಡಬೇಕು. ಘಟ್ಟಗಳಲ್ಲಿ ಸುರಂಗಗಳನ್ನು ಮಾಡಬಾರದು.

ರೆಸಾರ್ಟ್ ಮತ್ತು ಹೋಂ ಸ್ಟೇಗಳನ್ನು ಸಾಧ್ಯವಾದಷ್ಟು ನಿಯಂತ್ರಣ ಮಾಡಬೇಕು. ಅವೈಜ್ಞಾನಿಕವಾಗಿ ರಸ್ತೆಗಳನ್ನು ಅಗಲ ಮಾಡಬಾರದು. ಪರಿಸರಕ್ಕೆ ಧಕ್ಕೆ ಬಾರದಂತೆ ಪರಿಸರ ಕೇಂದ್ರೀಕೃತ ಯೋಜನೆಗಳನ್ನು ರೂಪಿಸಬೇಕು. ಮುಖ್ಯವಾಗಿ ಜನಸಾಮಾನ್ಯರಾದ ನಾವೆಲ್ಲರೂ ದುರ್ಘಟನೆಗಳಿಂದ ಪಾಠ ಕಲಿಯಬೇಕಾಗಿದೆ. ಸಾರಸಗಟಾಗಿ ಇಂತಹ ಯೋಜನೆಗಳನ್ನು ವಿರೋಧಿಸಬೇಕು. ಇಲ್ಲದಿದ್ದರೆ ನಮ್ಮ ಮುಂದಿನ ಪೀಳಿಗೆಯವರು ನಮ್ಮನ್ನು ಕ್ಷಮಿಸಲಾರರು, ಯೋಚಿಸಿ ನೋಡಿ.



ಮಮತಾ ಪ್ರಸಾದ್,
ವಿದ್ಯಾನಗರ,
ಶಿವಮೊಗ್ಗ

# ಮಳೆಗಾಲದಲ್ಲಿ ಅಪ್ಪಿತಪ್ಪಿಯೂ ನಿಮ್ಮ ಮಕ್ಕಳಿಗೆ ಈ ಆಹಾರಗಳನ್ನು ನೀಡಬೇಡಿ

ಮಳೆಗಾಲದಲ್ಲಿ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳು ಗಾಳಿ ಮತ್ತು ನೀರಿನ ಮೂಲಕ ವೇಗವಾಗಿ ಹರಡುತ್ತವೆ. ವಿಶೇಷವಾಗಿ ಮಕ್ಕಳಲ್ಲಿ ಇದು ರೋಗನಿರೋಧಕ ಶಕ್ತಿಯನ್ನು ದುರ್ಬಲಗೊಳಿಸುತ್ತವೆ. ಇದರ ಪರಿಣಾಮದಿಂದಾಗಿ, ಮಳೆಗಾಲದಲ್ಲಿ ಮಕ್ಕಳಲ್ಲಿ ಹೊಟ್ಟೆ ನೋವು, ವಾಂತಿ, ಅತಿಸಾರ ಮತ್ತು ಫುಡ್ ಪಾಯ್ಸನಿಂಗ್ ಸಮಸ್ಯೆಗಳು ಬಹಳ ಸಾಮಾನ್ಯವಾಗಿದೆ. ಮಳೆಗಾಲದಲ್ಲಿ ನಿಮ್ಮ ಮಕ್ಕಳನ್ನು ವೈದ್ಯರ ಬಳಿಗೆ ಹೋಗದಂತೆ ತಡೆಗಟ್ಟಲು ನೀವು ಬಯಸುವುದಾದರೆ, ಈ ನಾಲ್ಕು ಆಹಾರಗಳ ಸೇವನೆಯಿಂದ ಅವರನ್ನು ದೂರವಿಡಿ.

ಬೀದಿ ಆಹಾರ ಮತ್ತು ತೆರೆದ ತಿಂಡಿಗಳು ಮಳೆಗಾಲದಲ್ಲಿ ಮಕ್ಕಳನ್ನು ಗೋಲ್ ಗಪ್ಪ, ಭೇಲ್‌ಪುರಿ ಅಥವಾ ಐಸ್ ಕ್ರೀಮ್‌ನಂತಹ ಬೀದಿ ಆಹಾರಗಳಿಂದ ದೂರವಿರಿಸಿ. ಈ ಆಹಾರಗಳಲ್ಲಿ ಬಳಸುವ ನೀರು ಮತ್ತು ಐಸ್ ಹೆಚ್ಚಾಗಿ ಕಲುಷಿತವಾಗಿರುತ್ತದೆ. ಸಾಲ್ಮೊನೆಲ್ಲಾ ಮತ್ತು ಇ. ಕೋಲಿಯಂತಹ ನೀರಿನಿಂದ ಹರಡುವ ಬ್ಯಾಕ್ಟೀರಿಯಾಗಳು ಮಳೆಗಾಲದಲ್ಲಿ ಸಕ್ರಿಯವಾಗುತ್ತವೆ, ಇದು ಮಕ್ಕಳಲ್ಲಿ ಟೈಫಾಯಿಡ್ ಅಥವಾ ಗಂಭೀರ ಹೊಟ್ಟೆ ಸಮಸ್ಯೆಯನ್ನು ಉಂಟುಮಾಡಬಹುದು.

ಹಸಿರೆಲೆ ತರಕಾರಿಗಳನ್ನು ನೀಡುವ ಮುನ್ನ ತಿಳಿದಿರಲಿ ಈ ವಿಚಾರಗಳು ಹಸಿರು ಎಲೆ ತರಕಾರಿಗಳು (ಪಾಲಕ್ ಮತ್ತು ಎಲೆಕೋಸು ಮುಂತಾದವು) ಆರೋಗ್ಯಕರವೆಂದು ಪರಿಗಣಿಸಲ್ಪಟ್ಟಿದ್ದರೂ, ಮಳೆಗಾಲದಲ್ಲಿ ಅವುಗಳನ್ನು ತಪ್ಪಿಸುವುದು ಉತ್ತಮ. ಈ ತರಕಾರಿಗಳು ಕೊಳಕು, ತೇವಾಂಶ ಮತ್ತು ಸಣ್ಣ ಕೀಟಗಳು ಅಥವಾ ಅವುಗಳ ಮೊಟ್ಟೆಗಳನ್ನು ಅವುಗಳ ಪದರಗಳ ನಡುವೆ ಅಡಗಿಸಿಡಬಹುದು, ಇವುಗಳನ್ನು ಸಾಮಾನ್ಯವಾಗಿ ತೊಳೆದರೆ ಸಾಕಾಗುವುದಿಲ್ಲ. ನೀವು ಇವುಗಳನ್ನು ತಿನ್ನಿಸಬೇಕೆನ್ನುವುದಾದರೆ ಅವುಗಳನ್ನು ಬಿಸಿ ನೀರಿನಲ್ಲಿ ಚೆನ್ನಾಗಿ ತೊಳೆದು ಬೇಯಿಸಿ

**ಹಸಿ ತರಕಾರಿಗಳು:** ಹಸಿ ತರಕಾರಿಗಳು ಮತ್ತು ತೇವಾಂಶವಿರುವ ತರಕಾರಿಗಳು ಶಿಲೀಂಧ್ರ ಮತ್ತು ಬ್ಯಾಕ್ಟೀರಿಯಾಗಳಿಗೆ ಹೆಚ್ಚು ಒಳಗಾಗುತ್ತವೆ. ಮಕ್ಕಳಿಗೆ ಯಾವಾಗಲೂ ತಾಜಾ, ಬೆಚ್ಚಗಿನ ಮತ್ತು ಚೆನ್ನಾಗಿ ಬೇಯಿಸಿದ ಆಹಾರವನ್ನು ನೀಡಿ. ನೀವು ಇವರಿಗೆ ಹಣ್ಣುಗಳನ್ನು ತಿನ್ನಿಸಲು ಬಯಸಿದರೆ, ಅವುಗಳನ್ನು ಕತ್ತರಿಸಿದ ತಕ್ಷಣ ತಿನ್ನಿಸಿ.

ನಿಮ್ಮ ಮಕ್ಕಳು ಮಾಂಸಾಹಾರಿ ಆಹಾರವನ್ನು ತಿನ್ನಲು ಬಯಸಿದರೆ ಮಳೆಗಾಲದಲ್ಲಿ ಸಮುದ್ರಾಹಾರವನ್ನು (ಮೀನು ಮತ್ತು ಸೀಗಡಿಯಂತಹ) ತಪ್ಪಿಸಿ. ಇದು ಮೀನುಗಳ ಸಂತಾನೋತ್ಪತ್ತಿ ಕಾಲವಾಗಿದ್ದು, ಇದು ಸೋಂಕಿನ ಅಪಾಯವನ್ನು ಹೆಚ್ಚಿಸುತ್ತದೆ. ಇದಲ್ಲದೇ, ಮಕ್ಕಳ ಹೊಟ್ಟೆಯು ಸರಿಯಾಗಿ ಬೆಂದಿಲ್ಲದ ಚಿಕನ್ ಅಥವಾ ಮಟನ್ ಅನ್ನು ಜೀರ್ಣಿಸಿಕೊಳ್ಳಲು ಸಾಧ್ಯವಿಲ್ಲ,

ಇದು ತೀವ್ರ ಅಜೀರ್ಣ ಮತ್ತು ಅತಿಸಾರಕ್ಕೆ ಕಾರಣವಾಗಬಹುದು. ಮಕ್ಕಳ ಜೀರ್ಣಾಂಗ ವ್ಯವಸ್ಥೆಯು ವಯಸ್ಕರಿಗಿಂತ ಹೆಚ್ಚು ಸೂಕ್ಷ್ಮವಾಗಿರುತ್ತದೆ. ಆದ್ದರಿಂದ, ಈ ಮಳೆಗಾಲದಲ್ಲಿ ಹೊರಗಿನ ಆಹಾರವನ್ನು ಬಿಟ್ಟು, ನಿಮ್ಮ ಮಕ್ಕಳಿಗೆ ಮನೆಯಲ್ಲಿಯೇ ಆರೋಗ್ಯಕರವಾಗಿ ಬೇಯಿಸಿದ ತಾಜಾ, ಬಿಸಿ ಊಟವನ್ನು ನೀಡಿ. ಸ್ವಲ್ಪ ಎಚ್ಚರಿಕೆ ವಹಿಸುವುದರಿಂದ ಮಳೆಗಾಲದಲ್ಲಿ ನಿಮ್ಮ ಮಕ್ಕಳು ಆರೋಗ್ಯದಿಂದಿರುತ್ತಾರೆ.



ವಿದ್ಯಾರ್ಥಿ ವಿಜಯ

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
22

# 25 ನಿಮಿಷದ ಜಾದೂ

**ಈ ವಿಧಾನ ಸಮಯ ನಿರ್ವಹಣೆಯ ಮಾಸ್ಟರ್ ಕೀ. ಇನ್ನೂ 25 ನಿಮಿಷ ಮಾತ್ರ ಎಂಬ ಗಡುವು ಆಲಸ್ಯವನ್ನು ಓಡಿಸುತ್ತದೆ. ವಿರಾಮದಲ್ಲಿ ಮೊಬೈಲ್ ಸ್ಕ್ರೋಲ್ ಮಾಡದೆ ನಡೆದಾಡಿ, ನೀರು ಕುಡಿಯಿರಿ ಅಥವಾ ಕಣ್ಣು ಮುಚ್ಚಿ ವಿಶ್ರಾಂತಿ ಪಡೆಯಿರಿ. 4 ಪೊಮೊಡೊರೊಗಳ ನಂತರ 15 ನಿಮಿಷ ದೊಡ್ಡ ಬ್ರೇಕ್ ತೆಗೆದುಕೊಳ್ಳಬೇಕು. ಇದರಿಂದ ಮೆದುಳು ರೀಚಾರ್ಜ್ ಆಗಿ ಮುಂದಿನ ಓದಿಗೆ ಶಕ್ತಿ ಪಡೆಯುತ್ತದೆ.**




ವಿದ್ಯಾರ್ಥಿಯ ಯಶಸ್ಸಿಗೆ ಏಕಾಗ್ರತೆ ಮತ್ತು ಸಕ್ರಿಯ ಕಲಿಕೆ ಅತ್ಯಗತ್ಯ. ಆದರೆ ಗಮನ ಬೇಗ ಚದುರುತ್ತದೆ. ಇದಕ್ಕೆ ಸರಳ ಪರಿಹಾರವೇ ಪೊಮೊಡೊರೊ ತಂತ್ರ. 25 ನಿಮಿಷ ಪೂರ್ತಿ ಏಕಾಗ್ರತೆಯಿಂದ ಓದಿ, 5 ನಿಮಿಷ ವಿರಾಮ. ಈ ಚಕ್ರವೇ ಪೊಮೊಡೊರೊ ಶಕ್ತಿ. ದೊಡ್ಡ ಪಾಠವನ್ನು ಸಣ್ಣ ಗುರಿಗಳಾಗಿ ವಿಭಜಿಸಿದಾಗ ಮನಸ್ಸಿಗೆ ಭಯ ಕಡಿಮೆಯಾಗಿ ಓದು ಸುಲಭವಾಗುತ್ತದೆ.

ವೈಜ್ಞಾನಿಕವಾಗಿಯೂ ಇದು ಸಾಬೀತಾಗಿದೆ. ನಿರಂತರ ಓದಿಗಿಂತ ಚಿಕ್ಕ ಫೋಕಸ್ ಅವಧಿಗಳು ನೆನಪಿನ ಶಕ್ತಿಯನ್ನು ಹೆಚ್ಚಿಸುತ್ತವೆ. ವಿರಾಮದಲ್ಲಿ ಮೆದುಳು ಕಲಿತ ಮಾಹಿತಿಯನ್ನು ಜೋಡಿಸಿ ದೀರ್ಘಕಾಲ ಉಳಿಸುತ್ತದೆ. ಫಲಿತಾಂಶವಾಗಿ ಆಯಾಸ ಕಡಿಮೆ, ದಕ್ಷತೆ ಹೆಚ್ಚು. ಪರೀಕ್ಷೆಯ ಒತ್ತಡವೂ ನಿಧಾನವಾಗಿ ಕಡಿಮೆಯಾಗುತ್ತದೆ. ಪೊಮೊಡೊರೊ ಶಕ್ತಿ ಕೇವಲ ತಂತ್ರವಲ್ಲ, ಇದು ಶಿಸ್ತು.

ಇದು ವಿದ್ಯಾರ್ಥಿಯಲ್ಲಿ ಆತ್ಮವಿಶ್ವಾಸ ಮತ್ತು ಗುರಿಯ ಬದ್ಧತೆಯನ್ನು ಬೆಳೆಸುತ್ತದೆ. ನಾಳೆ ಓದೋಣ ಎಂಬ ಮಾತನ್ನು ಈಗ 25 ನಿಮಿಷ ಎಂಬ ಕ್ರಿಯೆಗೆ ತಿರುಗಿಸುತ್ತದೆ. ಇಂದೇ ಟೈಮರ್ ಆನ್ ಮಾಡಿ. ನಿಮ್ಮ ಮುಂದಿನ 25 ನಿಮಿಷವೇ ಯಶಸ್ಸಿನ ಮೊದಲ ಹೆಜ್ಜೆ.

# ಮಳೆಗಾಲದಲ್ಲಿ ಕಾಡುವ ಕೀಲು ನೋವಿಗೆ ಅರಿಶಿನ ಚಹಾವು ಹೇಗೆ ಸಹಕಾರಿ

ಮಳೆಗಾಲ ಆರಂಭವಾಗುತ್ತಿದ್ದಂತೆ ಅನೇಕರಿಗೆ ವಾತಾವರಣ ಬದಲಾವಣೆ ಯಿಂದಾಗಿ ಅನಾರೋಗ್ಯ ಸಮಸ್ಯೆ ಕಾಡುತ್ತದೆ. ಅದರಲ್ಲೂ ದೇಹದಲ್ಲಿ ಉರಿಯೂತ ಉಂಟಾಗುವ ಸಾಧ್ಯತೆ ಇರುವುದರಿಂದ ಅನೇಕ ಜನರು ಕೀಲು ನೋವು ಹಾಗೂ ಮೊಣಕಾಲು ನೋವಿನ ಸಮಸ್ಯೆಯಿಂದ ಬಳಲುತ್ತಾರೆ. ಇದಕ್ಕೆ ಮನೆಯಲ್ಲೇ ನೀವು ಪರಿಹಾರ ಕಂಡುಕೊಳ್ಳಬಹುದು.

ಈ ಸಮಸ್ಯೆಗೆ ಅರಿಶಿನ ಚಹಾ ಒಂದು ಅತ್ಯುತ್ತಮ ನೈಸರ್ಗಿಕ ಔಷಧಿಯಾಗಿದ್ದು ಉರಿಯೂತ ನಿವಾರಕ ಗುಣ ಇದರಲ್ಲಿದೆ. ಅರಶಿನದ ಕರ್ಕ್ಯುಮಿನ್ ಎಂದು ಕರೆಯಲ್ಪಡುವ ಸಂಯುಕ್ತವು ಕೀಲು ನೋವು ಇರುವವರ ನೋವಿನ ಸಮಸ್ಯೆಯನ್ನು 30% ರಷ್ಟು ಕಡಿಮೆ ಮಾಡುತ್ತದೆ.

ಅರಿಶಿನವು ನೋವು ನಿವಾರಕ ಮಾತ್ರೆಗಳಿಗಿಂತ ಕಡಿಮೆ ಅಡ್ಡಪರಿಣಾಮಗಳನ್ನು ಹೊಂದಿದ್ದು, ಕೀಲುಗಳ ಜಡತ್ವವನ್ನು ಕಡಿಮೆ ಮಾಡಿ ಆಯಕ್ಟೀವ್ ಆಗಿ ಇರಲು ಸಹಾಯ ಮಾಡುತ್ತವೆ. ದೇಹದಲ್ಲಿನ ಉರಿಯೂತವನ್ನು ನಿಯಂತ್ರಿಸಿದಾಗ, ಕೀಲು ನೋವಿನ ತೀವ್ರತೆಯನ್ನು ಕಡಿಮೆ ಮಾಡಬಹುದು..

ಇದಲ್ಲದೆ, ಅರಿಶಿನ ಚಹಾವು ಕೀಲುಗಳನ್ನು ಬಲಪಡಿಸುವ ಉತ್ಕರ್ಷಣ ನಿರೋಧಕಗಳನ್ನು ಹೊಂದಿರುತ್ತದೆ.

ದೀರ್ಘಕಾಲದ ಉರಿಯೂತಕ್ಕೆ ಸಂಬಂಧಿಸಿದ ಆಕ್ಸಿಡೇಟಿವ್ ಒತ್ತಡವನ್ನು ಕಡಿಮೆ ಮಾಡುವ ಮೂಲಕ ಕೀಲು ನೋವನ್ನು ನಿವಾರಿಸಬಹುದು.

ಅರಿಶಿನ ಚಹಾವು ಕೀಲುಗಳೊಳಗಿನ ದೀರ್ಘಕಾಲದ ಉರಿಯೂತವನ್ನು ಕಡಿಮೆ ಮಾಡುತ್ತದೆ ಎಂದು ತಿಳಿಸಿದೆ.

ಉಗುರು ಬೆಚ್ಚಗಿನ ನೀರಿನಲ್ಲಿ ಅರಿಶಿನವನ್ನು ಪುಡಿಮಾಡಿ ಬಿಸಿ ನೀರಿನಲ್ಲಿ ಹಾಕಿ ಕುಡಿಯಬಹುದು... ಕಪ್ ಕುಡಿಯುವ ನೀರಿಗೆ ಅರ್ಧ ಅಥವಾ 1 ಚಮಚ ಅರಿಶಿನ ಪುಡಿ ಅಥವಾ ಜಜ್ಜಿದ ಹಸಿ ಅರಿಶಿನ ಹಾಕಿ ಇದಕ್ಕೆ ಚಿಟಿಕೆ ಕರಿ ಮೆಣಸಿನ ಪುಡಿ ರುಚಿಗೆ ಸ್ವಲ್ಪ ಜೇನುತುಪ್ಪ, ಶುಂಠಿ ಬಳಕೆ ಮಾಡಬಹುದು.

ನೀರನ್ನು ಚೆನ್ನಾಗಿ ಕುದಿಸಿ ಅದಕ್ಕೆ ಅರಿಶಿನ ಮತ್ತು ಮೆಣಸಿನ ಪುಡಿಯನ್ನು ಸೇರಿಸಿ.

ಸ್ವಲ್ಪ ಸಮಯದ ನಂತರ ಸೋಸಿಕೊಂಡು ಕುಡಿಯಿರಿ. ಈ ಸಮಸ್ಯೆಗೆ ಅರಿಶಿನ ಚಹಾ ಒಂದು ಅತ್ಯುತ್ತಮ ನೈಸರ್ಗಿಕ ಔಷಧಿಯಾಗಿದ್ದು

ವಯಸ್ಸಾದವರು ಮತ್ತು ಕೀಲು ಜಡತ್ವ ಇರುವವರಿಗೆ ಪ್ರಯೋಜನಕಾರಿಯಾಗಿದೆ. ಹಾಗೆಯೇ ಆಸ್ಟಿಯೋಆರ್ಥ್ರೈಟಿಸ್ ಸಮಸ್ಯೆ ಇರುವ ರೋಗಿಗಳು ಹಾಗೂ ಒಂದೇ ಕಡೆ ಕುಳಿತು ಕೆಲಸ ಮಾಡುವ ಉದ್ಯೋಗಿಗಳಿಗೂ ಸಹಕಾರಿ..

# ತಲೆ ಮತ್ತು ಕುತ್ತಿಗೆ ಕ್ಯಾನ್ಸರ್‌ನ ಮೌನ ಲಕ್ಷಣಗಳನ್ನು ನಿರ್ಲಕ್ಷಿಸಬೇಡಿ

ತಲೆ ಮತ್ತು ಕುತ್ತಿಗೆ ಭಾಗದಲ್ಲಿ ಕಾಣಿಸಿಕೊಳ್ಳುವ ಕ್ಯಾನ್ಸರ್‌ಗಳು ಬಹುತೇಕ ಸಂದರ್ಭ ಗಳಲ್ಲಿ ಮುಂದುವರಿದ ಹಂತದಲ್ಲಿಯೇ ಪತ್ತೆಯಾಗುತ್ತವೆ. ಆರಂಭಿಕ ಹಂತದಲ್ಲಿ ಕಾಣಿಸಿಕೊಳ್ಳುವ ಲಕ್ಷಣಗಳು ಸಾಮಾನ್ಯವಾಗಿ ಸೂಕ್ಷ್ಮವಾಗಿದ್ದು, ನೋವಿಲ್ಲದೆ ಕಾಣಿಸಿಕೊಳ್ಳುವುದರಿಂದ ಜನರು ಅವುಗಳನ್ನು ಅಲರ್ಜಿ, ಸೋಂಕು, ಒತ್ತಡ ಅಥವಾ ಸಾಮಾನ್ಯ ದಂತ ಸಮಸ್ಯೆಗಳೆಂದು ಭಾವಿಸಿ ನಿರ್ಲಕ್ಷಿಸುತ್ತಾರೆ.

ಈ ನಿರ್ಲಕ್ಷ್ಯವೇ ರೋಗ ಪತ್ತೆಯಲ್ಲಿ ವಿಳಂಬಕ್ಕೆ ಕಾರಣವಾಗುತ್ತಿದ್ದು, ಚಿಕಿತ್ಸೆ ಹೆಚ್ಚು ಸಂಕೀರ್ಣವಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ತಲೆ ಮತ್ತು ಕುತ್ತಿಗೆ ಕ್ಯಾನ್ಸರ್ ಎಂಬುದು ಬಾಯಿ, ಗಂಟಲು, ಧ್ವನಿಪೆಟ್ಟಿಗೆ ಮೂಗಿನ ಒಳಭಾಗ, ಸೈನಸ್, ಲಾಲಾರಸ ಗ್ರಂಥಿಗಳು ಹಾಗೂ ತಲೆ ಮತ್ತು ಕುತ್ತಿಗೆ ಭಾಗದ ಇತರ ಅಂಗಾಂಶ ಗಳಲ್ಲಿ ಉಂಟಾಗುವ ವಿವಿಧ ಕ್ಯಾನ್ಸರ್ ಗಳನ್ನು ಒಳಗೊಂಡಿರುವ ವಿಶಾಲ ಪದವಾಗಿದೆ. ಈ ಕ್ಯಾನ್ಸರ್‌ಗಳಲ್ಲಿ ಬಹುತೇಕವು ಆರಂಭಿಕ ಹಂತದಲ್ಲಿಯೇ ಪತ್ತೆಯಾದರೆ ಯಶಸ್ವಿಯಾಗಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ. ಆದ್ದರಿಂದ ಲಕ್ಷಣಗಳನ್ನು ಬೇಗ ಗುರುತಿಸಿ ವೈದ್ಯಕೀಯ ಪರೀಕ್ಷೆಗೆ ಒಳಗಾಗುವುದು ಅತ್ಯಂತ ಮುಖ್ಯ. ಹಲವು ಕಾಯಿಲೆಗಳು ತೀವ್ರ ನೋವು ಅಥವಾ ಅಸ್ವಸ್ಥತೆಯ ಮೂಲಕ ಗಮನ ಸೆಳೆಯುತ್ತವೆ. ಆದರೆ ತಲೆ ಮತ್ತು ಕುತ್ತಿಗೆ ಕ್ಯಾನ್ಸರ್‌ಗಳು ಆರಂಭಿಕ ಹಂತದಲ್ಲಿ ಯಾವುದೇ ಗಮನಾರ್ಹ ತೊಂದರೆಯನ್ನು ಉಂಟುಮಾಡದೇ ನಿಧಾನವಾಗಿ ಬೆಳೆಯಬಹುದು.

ಕೆಲವೊಮ್ಮೆ ಲಕ್ಷಣಗಳು ತುಂಬಾ ಸೌಮ್ಯವಾಗಿರಬಹುದು ಅಥವಾ ಸಂಪೂರ್ಣವಾಗಿ ಕಾಣಿಸದೇ ಇರಬಹುದು. ಹೀಗಾಗಿ ರೋಗಿಗಳು ಅವುಗಳನ್ನು ಸಾಮಾನ್ಯ ಆರೋಗ್ಯ ಸಮಸ್ಯೆಗಳೆಂದು ಭಾವಿಸಿ ಕಡೆಗಣಿಸುತ್ತಾರೆ. ಆರಂಭದಲ್ಲಿ ಆರೋಗ್ಯ ತಜ್ಞರೂ ಸಹ ಸಾಮಾನ್ಯ ಸೋಂಕು ಅಥವಾ ಇತರ ಕಾಯಿಲೆಗಳ ಸಾಧ್ಯತೆ ಪರಿಶೀಲಿಸುವ ಕಾರಣ ಕ್ಯಾನ್ಸರ್ ಪತ್ತೆಯಾಗಲು ಸಮಯ ಹಿಡಿಯಬಹುದು.

ಯಾವುದೇ ಲಕ್ಷಣ ಎರಡು ಅಥವಾ ಮೂರು ವಾರಗಳಿಗಿಂತ ಹೆಚ್ಚು ಕಾಲ ಮುಂದುವರಿದರೆ ಅಥವಾ ದಿನದಿಂದ ದಿನಕ್ಕೆ ಉಲ್ಬಣವಾಗುತ್ತಿದ್ದರೆ ಅದನ್ನು ನಿರ್ಲಕ್ಷಿಸಬಾರದು. ಸಾಮಾನ್ಯ ಗಂಟಲು ನೋವು, ಬಾಯಿಯ ಹುಣ್ಣು ಅಥವಾ ಧ್ವನಿಯ ಬದಲಾವಣೆ ಹೆಚ್ಚಿನ ಸಂದರ್ಭಗಳಲ್ಲಿ ಅಪಾಯಕಾರಿಯಾಗಿರುವುದಿಲ್ಲ.

ಆದರೆ ಅವು ದೀರ್ಘಕಾಲ ಮುಂದುವರಿದರೆ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳುವುದು ಅತ್ಯಗತ್ಯ. ತಲೆ ಮತ್ತು ಕುತ್ತಿಗೆ ಕ್ಯಾನ್ಸರ್‌ನ ಆರಂಭಿಕ ಲಕ್ಷಣಗಳು ಮೊದಲು ಬಾಯಿಯಲ್ಲೇ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು. ಎರಡು ಅಥವಾ ಮೂರು ವಾರಗಳಾದರೂ ಗುಣವಾಗದ ಬಾಯಿಯ ಹುಣ್ಣು ಅಥವಾ ಗಾಯ.

ನಾಲಿಗೆ, ಒಸಡು ಅಥವಾ ಬಾಯಿಯ ತಳಭಾಗದಲ್ಲಿ ನಿರಂತರವಾಗಿ ಕಾಣಿಸಿಕೊಳ್ಳುವ ಕೆಂಪು, ಬಿಳಿ ಅಥವಾ ಕೆಂಪು-ಬಿಳಿ ಮಿಶ್ರ ಬಣ್ಣದ ಕಲೆಗಳು.

ಯಾವುದೇ ಸ್ಪಷ್ಟ ಹಲ್ಲಿನ ಸಮಸ್ಯೆಯಿಲ್ಲದಿದ್ದರೂ ಹಲ್ಲುಗಳು ಅಲುಗಾಡುವುದು ಅಥವಾ ಕೃತಕ ಹಲ್ಲುಗಳು ಇದ್ದಕ್ಕಿದ್ದಂತೆ ಸರಿಯಾಗಿ ಹೊಂದಿಕೊಳ್ಳದಿರುವುದು.

ನಾಲಿಗೆ ಅಥವಾ ಬಾಯಿಯ ಯಾವುದೇ ಭಾಗದಲ್ಲಿ ಕಾರಣವಿಲ್ಲದೆ ಮರಗಟ್ಟಿದ ಅನುಭವ ಅಥವಾ ಸ್ಪರ್ಶಜ್ಞಾನ ಕಡಿಮೆಯಾಗುವುದು.

# ಸಿದ್ದರಾಮಯ್ಯನವರ ನೇತೃತ್ವದಲ್ಲೇ 2028ರ ಚುನಾವಣೆ: ಸಚಿವ ಸತೀಶ್ ಜಾರಕಿಹೊಳಿ

• **ಉದಯವಾಹಿನಿ ಬೆಳಗಾವಿ:**

ಸಿದ್ದರಾಮಯ್ಯನವರು ಪಕ್ಷ ಸಂಘಟನೆಗೆ ಬರುತ್ತಾರೆ. ನಾವು ಮೊದಲಿನಿಂದಲೂ ಅದನ್ನೇ ಹೇಳುತ್ತಿದ್ದೇವೆ. ಎಲ್ಲರೂ ಅದನ್ನೇ ಹೇಳುತ್ತಾರೆ. 2028ರಲ್ಲಿ ಅವರ ನೇತೃತ್ವದಲ್ಲೇ ನಾವು ಚುನಾವಣೆಗೆ ಹೋಗುತ್ತೇವೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ನಗರದಲ್ಲಿಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ. ಅವರ ನೇತೃತ್ವದಲ್ಲಿಯೇ ನಾವು ಮುಂದಿನ ಚುನಾವಣೆ ಎದುರಿಸಲಿದ್ದೇವೆ. ಅಹಿಂದ ನಾಯಕತ್ವ ಯಾರು ವಹಿಸಿಕೊಳ್ಳುತ್ತಾರೆ ಎಂಬ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಕಾಲ ಕಾಲಕ್ಕೆ ಅದು ಗೊತ್ತಾಗುತ್ತದೆ.

ಅದನ್ನು ಅಷ್ಟು ಹೈಲೆಟ್ ಮಾಡುವ ಅವಶ್ಯಕತೆ ಇಲ್ಲ ಎಂದರು. ಬೆಳಗಾವಿ ದೊಡ್ಡ ಜಿಲ್ಲೆ. ಹೀಗಾಗಿ, ಮೂರು ಸ್ಥಾನ ಕೊಡಬೇಕು. ಕೊಟ್ಟರೆ ಒಳ್ಳೆಯದಾಗುತ್ತದೆ. ಯಾರಿಗೆ ಕೊಡಬೇಕು ಅಂತಾ ನಾನೇನು ಶಿಫಾರಸು ಮಾಡಿಲ್ಲ. ಹೈಕಮಾಂಡ್ ತೀರ್ಮಾನಿಸುತ್ತದೆ. ಜಿಲ್ಲೆಯವರು ನಮಗೆ ಯಾರು ಸಂಪರ್ಕ ಮಾಡಿಲ್ಲ. ಮುಂದಿನ ಚುನಾವಣೆಗೆ ಯಾರು ಅನುಕೂಲ ಆಗ್ತಾರೋ ಆ ದೃಷ್ಟಿ ಇಟ್ಟುಕೊಂಡು ಮಾಡುತ್ತಾರೆ ಎಂದು ಹೇಳಿದರು.

ಸಚಿವ ಸಂಪುಟ ವಿಸ್ತರಣೆ ಯಾವಾಗಲಾದರೂ ಆಗಲಿ, ಬೇಗ ಆಗಲಿ ಅನ್ನೋದು ಇದೆ ಎಂದಿರುವ ಜಾರಕಿಹೊಳಿ, ಬಿ.ಕೆ.ಹರಿಪ್ರಸಾದ್ ಅವರಿಗೆ ಸಚಿವ ಸ್ಥಾನ ನೀಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ ಎಂದರು.


ಉದಯವಾಹಿನಿ ಚಿತ್ರ

ಎಸ್ಐಆರ್ ಅನ್ನು ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂಬ ಆರೋಪಕ್ಕೆ, ಎಸ್ಐಆರ್ ಸುಗಮವಾಗಿ ನಡೆಯುತ್ತಿದೆ. ಸರಿಯಾದ ಸಮಯಕ್ಕೆ ಎಲ್ಲವೂ ಪೂರ್ಣ ಆಗುತ್ತದೆ. ಎಲೆಕ್ಷನ್ ಕಮಿಷನ್ ಅಲ್ಲೇ ದೆಹಲಿಯಲ್ಲಿದೆ. ಅವರಿಗೆ ಹೇಳಿದ್ರೇ ವಿಚಾರಣೆ ಮಾಡುತ್ತಾರೆ. ಯಾವುದು ಸಮಸ್ಯೆ ಇದೆ ಅನ್ನೋದನ್ನು ಹೇಳಲಿ. ಈಗಾಗಲೇ ದೂರು ಕೂಡ ಕೊಟ್ಟಿದ್ದಾರೆ ಎಂದು ಸ್ಪಷ್ಟಪಡಿಸಿದರು. ಆರ್‌ಎಸ್‌ಎಸ್ ಏನೇ ಹೇಳಿದ್ರೂ ಹೊರಗಡೆ ಬರಲ್ಲ ಅದು ಗುಪ್ತವಾಗಿ ಇರುತ್ತದೆ. ರಾಮ ಮಂದಿರ ಹೂಡಿಕೆ ಕಳ್ಳತನ ಪ್ರಕರಣ. ಹುಂಡಿ ಕಳ್ಳತನ ಗಂಭೀರ ವಿಷಯ ಆದರ ಬಗ್ಗೆ ವಿಚಾರಣೆ ಆಗಬೇಕು. ಈಗಾಗಲೇ ತನಿಖೆ ಮಾಡುತ್ತಿದ್ದಾರೆ. ಸರಿಯಾದ ದಿಕ್ಕಿನಲ್ಲಿ ಯಾರು ದೋಷಿ ಇದಾರೆ ಅವರನ್ನ ಟಾರ್ಗೆಟ್ ಮಾಡಬೇಕು ಎಂದು ತಿಳಿಸಿದರು.

ಬೆಳಗಾವಿ ಜಿಲ್ಲೆಯಲ್ಲಿ ಅರ್ಧದಷ್ಟು ಮಳೆಯಾಗಿ ಪರಿಹಾರ ಆಗಿದೆ. ಡ್ಯಾಂಗೆ ನೀರು ಬಂದಿದೆ ಮುಂದೆ ಇನ್ನೂ ಮಳೆ ಇದೆ. ಕಾಲುವೆಗಳಿಗೆ ನೀರು ಹರಿಸುವುದನ್ನು ಬಂದ್ ಮಾಡಿದ್ದೇವೆ. ಕೆಲವು ಪ್ರದೇಶದಲ್ಲಿ ಮಳೆ ಆಗಿಲ್ಲ, ಆ ಕುರಿತು ಸರ್ವೆ ಮಾಡುತ್ತೇವೆ.

ಡಿಸಿ ಆದೇಶ ಮಾಡುತ್ತಾರೆ. ಏನೂ ಕೊಡಬೇಕು ಅಂತಾ ಸರ್ಕಾರ ನಿರ್ಧರಿಸುತ್ತದೆ. ಕೆಲವು ಕಡೆ ಬೆಳೆ ಬಂದಿದೆ ಕೆಲವು ಕಡೆ ಬಂದಿಲ್ಲ, ಸರ್ವೆ ಮಾಡಿ ಪರಿಹಾರ ಕೊಡಲಾಗುತ್ತದೆ. ಸಾಲ ಮನ್ನಾ ಬಗ್ಗೆ ಸರ್ಕಾರದಲ್ಲಿ ಚರ್ಚೆ ಆಗಬೇಕು. ಇದು ನಮ್ಮ ಹಂತದಲ್ಲಿ ಇಲ್ಲ, ಸರ್ಕಾರ ನೋಡುತ್ತದೆ ಎಂದು ಹೇಳಿದರು.

ಹಾಲಿನ ದರ ಹೆಚ್ಚಳ ಮಾಡಬೇಕೆಂಬ ಬೇಡಿಕೆ ಬಗ್ಗೆ ಗೊತ್ತಿಲ್ಲ, ಅದಕ್ಕೆ ಮಂತ್ರಿ ಬರಬೇಕು. ಮಂತ್ರಿ ಬಂದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದರು.

# 8 ವರ್ಷ ಕಳೆದರೂ ಕಡತದಲ್ಲೇ ಸೇತುವೆ ಕಾಮಗಾರಿ: ನದಿ ದಾಟಲು ಜನರ ಪರದಾಟ

## ತುಂಗಭದ್ರಾ ನದಿ ದಿನದಿಂದ ದಿನಕ್ಕೆ ಬತ್ತುತ್ತಿದ್ದು, ಸಿರುಗುಪ್ಪ ತಾಲ್ಲೂಕಿನ ನಿಟ್ಟೂರು ಸಿಂಗಾಪುರ ಭಾಗದ ಜನರು ನದಿ ದಾಟಲು ಸಮಸ್ಯೆ ಎದುರಿಸುವಂತಾಗಿದೆ.

• **ಉದಯವಾಹಿನಿ ಬಳ್ಳಾರಿ:**

ಒಂದೆಡೆ ಮುಂಗಾರು ಕೈಕೊಟ್ಟಿದೆ. ಮತ್ತೊಂದೆಡೆ ತುಂಗಭದ್ರಾ ನದಿ ದಿನದಿಂದ ದಿನಕ್ಕೆ ಬತ್ತುತ್ತಿದ್ದು, ಸಿರುಗುಪ್ಪ ತಾಲ್ಲೂಕಿನ ನಿಟ್ಟೂರುಸಿಂಗಾಪುರ ಭಾಗದ ಜನರ ಸಂಕಷ್ಟಕ್ಕೆ ಸಿಲುಕಿದ್ದಾರೆ. ನದಿ ತುಂಬಿದ್ದಾಗ ದೋಣಿಯಲ್ಲಿ ಸಂಚರಿಸುತ್ತಿದ್ದ ಜನರು, ಈಗ ನದಿ ಬತ್ತಿರುವ ಕಾರಣ ಅರ್ಧ ಕಿಲೋಮೀಟರ್‌ಗೂ ಹೆಚ್ಚು ಬೈಕ್

1. ಜೀವ ಭಯದಲ್ಲೇ ನದಿ ದಾಟುತ್ತಿರುವ ಜನ
2. ತೆಪ್ಪದ ಮೂಲಕವೇ ಜನ ನದಿ ದಾಟಬೇಕಾಗಿದೆ
3. ಸಂಜೆ ವೇಳೆಗೆ ಮೊಸಳೆಗಳ ಭಯ

ಗಳನ್ನು ತಳ್ಳಿಕೊಂಡು ಹೋಗಿ, ಬಳಿಕ ಹರಿಗೋಲು (ತೆಪ್ಪ) ಮೂಲಕ ನದಿ ದಾಟುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪ್ರತಿದಿನ ಉದ್ಯೋಗ, ವ್ಯಾಪಾರ, ಶಿಕ್ಷಣ ಹಾಗೂ ಕೃಷಿ ಕೆಲಸಗಳಿಗೆ ಕಾರಟಗಿ, ಸಿಂಧನೂರು, ಗಂಗಾವತಿ ಸೇರಿದಂತೆ ವಿವಿಧ ಪ್ರದೇಶಗಳಿಗೆ ತೆರಳುವ ನೂರಾರು ಜನ ಇದೇ ಮಾರ್ಗವನ್ನು ಅವಲಂಬಿಸಿದ್ದಾರೆ. ಆದರೆ, ಸೇತುವೆ ಇಲ್ಲದ ಕಾರಣ ಅವರ ನಿತ್ಯದ ಪ್ರಯಾಣವೇ ಸಾಹಸಮಯವಾಗಿದೆ.

ಸೇತುವೆ ನಿರ್ಮಾಣವಾದರೆ ಈ ಭಾಗದ ಜನರ ಹಲವು ವರ್ಷಗಳ ಕನಸು ನನಸಾಗಲಿದೆ. ಆದರೆ, ಕಡತಗಳಲ್ಲೇ ಯೋಜನೆ



ಉದಯವಾಹಿನಿ ಚಿತ್ರ

ಸಿಲುಕಿರುವುದು ಬೇಸರದ ಸಂಗತಿ ಎಂದು ಸಿಂಗಾಪುರ ನಿವಾಸಿ ಬಸಣ್ಣ ಅಬಕಾರಿ ಬೇಸರ ವ್ಯಕ್ತಪಡಿಸಿದ್ದಾರೆ.

**ಜೀವ ಭಯದಲ್ಲೇ ನದಿ ದಾಟುತ್ತಿರುವ ಜನ:** ಪ್ರಸ್ತುತ ತೆಪ್ಪದ ಮೂಲಕವೇ ಜನ ನದಿ ದಾಟಬೇಕಾಗಿದೆ. ಒಬ್ಬ ವ್ಯಕ್ತಿಗೆ 20 ಹಾಗೂ ಬೈಕ್‌ಗೆ 30 ರೂಪಾಯಿ ಶುಲ್ಕ ನಿಗದಿಪಡಿಸಲಾಗದೆ. ಸಂಜೆ ವೇಳೆಗೆ ಮೊಸಳೆಗಳ ಭಯವೂ ಇರುವುದರಿಂದ ಪ್ರತಿಯೊಂದು ಪ್ರಯಾಣವೂ ಆತಂಕದಲ್ಲೇ ಸಾಗುತ್ತಿದೆ. ಸೇತುವೆ ನಿರ್ಮಾಣವಾದರೆ ಸಮಯ, ಹಣ ಮತ್ತು ಶ್ರಮ ಉಳಿಯುವುದರ ಜೊತೆಗೆ ಸುರಕ್ಷಿತ ಸಂಚಾರಕ್ಕೂ ಅವಕಾಶ ಸಿಗಲಿದೆ ಎಂಬುದು ಸ್ಥಳೀಯರ ಅಭಿಪ್ರಾಯ.

ತುಂಗಭದ್ರಾ ಹೊಳೆ ಬಹುತೇಕ ಬತ್ತಿರುವುದರಿಂದ ರೈತರ ಆತಂಕ ಮತ್ತಷ್ಟು ಹೆಚ್ಚಿದೆ. ಭತ್ತದ ನಾಟಿಗಾಗಿ ಸಾವಿರಾರು ರೂಪಾಯಿ ಖರ್ಚು ಮಾಡಿ ಸಸಿ ಮಡಿಗಳನ್ನು ಸಿದ್ಧಪಡಿಸಿರುವ ರೈತರು ಈಗ ನೀರಿನ ಕೊರತೆಯಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ. ಹೊಳೆ ದಂಡೆಯಿಂದ ಪಂಪ್‌ಸೆಟ್‌ಗಳನ್ನು ನೀರು ಇರುವ ಭಾಗದವರೆಗೆ ಸಾಗಿಸಿ ಅಲ್ಲಿಂದ ನೀರೆತ್ತುವುದು ರೈತರಿಗೆ ನಿತ್ಯದ ಸಾಹಸವಾಗಿದೆ. ನಿಟ್ಟೂರು ಸಿಂಗಾಪುರ ಮಾರ್ಗವು ಸಿರುಗುಪ್ಪ ತಾಲೂಕಿನ ನದಿಪಾತ್ರದ ಗ್ರಾಮಗಳಿಗೆ ಪ್ರಮುಖ ಸಂಪರ್ಕ ಕೊಂಡಿಯಾಗಿದೆ. ಪ್ರತಿದಿನ ನೂರಾರು ಬೈಕ್ ಸವಾರರು, ವಿದ್ಯಾರ್ಥಿಗಳು, ರೈತರು, ವ್ಯಾಪಾರಿಗಳು ಇದೇ ಮಾರ್ಗದಲ್ಲಿ ನದಿ ದಾಟುತ್ತಿದ್ದಾರೆ. ಮದುವೆ ಸೀಸನ್ ಸೇರಿದಂತೆ ವಿಶೇಷ ಸಂದರ್ಭಗಳಲ್ಲಿ ಸಂಚಾರದ ಒತ್ತಡ ಇನ್ನಷ್ಟು ಹೆಚ್ಚಾಗುತ್ತದೆ.

> ಸೇತುವೆ ಕಾಮಗಾರಿಗೆ ಸಂಬಂಧಿಸಿದಂತೆ ಡಿಪಿಆರ್ ಪ್ರಕ್ರಿಯೆ ಮುಂದುವರಿದಿದೆ. ಈವರೆಗೆ ಯಾವುದೇ ಮಹತ್ವದ ಬದಲಾವಣೆ ಆಗಿಲ್ಲ. ಶೀಘ್ರದಲ್ಲೇ ಪ್ರತ್ಯೇಕ ಅನುದಾನ ತರಲು ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಲಾಗುವುದು ಎಂದು ತಿಳಿಸಿದ್ದಾರೆ.
> ಸಿರುಗುಪ್ಪ ಶಾಸಕ ಬಿ. ಎಂ. ನಾಗರಾಜ

### 8 ವರ್ಷವಾದರೂ ಸೇತುವೆ ಕನಸು ನನಸಾಗಿಲ್ಲ


2018ರಲ್ಲಿ ಆಗಿನ ಕೊಪ್ಪಳ ಸಂಸದ ಕರಡಿ ಸಂಗಣ್ಣ ಅವರು ನಿಟ್ಟೂರು ಸಿಂಗಾಪುರ ಸೇತುವೆ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದ್ದರು. ಆರಂಭದಲ್ಲಿ 80 ಕೋಟಿ ಅಂದಾಜು ವೆಚ್ಚವಿದ್ದ ಯೋಜನೆ ನಂತರ 120 ಕೋಟಿಗೆ ಏರಿಕೆಯಾಯಿತು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಅನುದಾನ ಮಂಜೂರಾದರೂ ಭೂಸ್ವಾಧೀನ ಪ್ರಕ್ರಿಯೆ ವಿಳಂಬಗೊಂಡ ಕಾರಣ ಕಾಮಗಾರಿ ಇನ್ನೂ ಆರಂಭವಾಗಿಲ್ಲ. ಕಳೆದ ಡಿಸೆಂಬರ್‌ನಲ್ಲಿ ಜಿಲ್ಲಾಡಳಿತವು ಸಿಇಪಿಎಂಐರ್ಝೆಡ್ ಯೋಜನೆಯಡಿ 13.60 ಕೋಟಿ ಮೀಸಲಿಟ್ಟಿದ್ದರೂ, ಭೂಸ್ವಾಧೀನ ಹಾಗೂ ಕಾಮಗಾರಿ ಎರಡೂ ನೆನೆಗುದಿಗೆ ಬಿದ್ದಿದೆ.

# ಮಾದಿಗಾ ಸಮಾಜ ಆರ್ಥಿಕ,ಸಾಮಾಜಿಕ,ರಾಜಕೀಯವಾಗಿ ಬೆಳಯಲು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ:ಕಟ್ಟಿಮನಿ

• **ಉದಯವಾಹಿನಿ,ಚಿಂಚೋಳಿ**

ಸಾಮಾಜಿಕ ಆರ್ಥಿಕ,ರಾಜಕೀಯವಾಗಿ ನಮ್ಮ ಮಾದಿಗ ಸಮಾಜ ಬೆಳೆಯಬೇಕೆಂದರೆ ಸಮಾಜದ ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ಮಾದರ ಮಹಾಸಭಾ ಜಿಲ್ಲಾಧ್ಯಕ್ಷ ಗೋಪಾಲರಾವ ಕಟ್ಟಿಮನಿ ಕರೆ ನೀಡಿದರು.

ತಾಲ್ಲೂಕಿನ ಕೋಟಗಾ ಗ್ರಾಮದಲ್ಲಿ ದೇಶದ ಮಾಜಿ ಉಪಪ್ರಧಾನಿ ಹಸಿರು ಕ್ರಾಂತಿ ಹರಿಕಾರರು ಡಾ.ಬಾಬು ಜಗಜೀವನರಾಮ್ ಅವರ ನೂತನ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು,ನಾಲ್ಕು ದಿನಗಳ ಹಿಂದೆ ನಾಮಫಲಕಕ್ಕೆ ಅವಮಾನ ಮಾಡಿ ಸಮಾಜಕ್ಕೆ ಅಗೌರವ ತೋರಿದ್ದು ಖಂಡನೀಯವಾಗಿದ್ದು,ಕಿಡಿಗೇಡಿಗಳನ್ನು ಬಂಧಿಸಬೇಕು,ಜಿಲ್ಲೆಯಲ್ಲಿನ ಎಲ್ಲಾ ಮಾದಿಗಾ ಸಮಾಜ ಕೋಟಗಾ ಗ್ರಾಮದ ಜೋತೆ ಇದ್ದೇವೆ,ಮಾದಿಗಾ ಸಮಾಜವು ಶಾಂತಿ ಪ್ರೇಯರು ಆದರೆ ನಮ್ಮ ಮೇಲೆ ದೌರ್ಜನ್ಯ ನಡೆದರೆ ನಮಗೆ ಅನ್ಯಾಯವಾದರೆ ಸುಮ್ಮನೆ ಕೂಡುವುದಿಲ್ಲ,ನಾವು ಬೆಳೆಯಬೇಕಾಗಿರುವುದು ರಾಜಕೀಯ ಶಕ್ತಿ ಅವಶ್ಯಕತೆಯಿದೆ,ಚುನಾವಣಾ ಸಂದರ್ಭ


ಉದಯವಾಹಿನಿ ಚಿತ್ರ

ಹಣ,ಹೆಂಡ್ಡಾ ಪಡೆದೂ ಮತ ಕೂಡುವುದು ಬಿಟ್ಟು ಮಾದಿಗಾ ಸಮಾಜದವರ ಜೋತೆ ನಿಲ್ಲಬೇಕು.

ಈಗಾಗಲೇ ಮುಂದೆ ಬರುವ ಗ್ರಾ.ಪಂ.ತಾಪಂ.ಜಿಪಂ. ಚುನಾವಣೆಗಳಲ್ಲಿ ನಾವೂ ಒಗ್ಗಟ್ಟಾಗಿ ಇರಬೇಕು ನಮ್ಮ ಸಮಾಜದ ಬಾಂಧವರಿಗೆ ಬೆಂಬಲಿಸಿ ಚುನಾವಣೆಯಲ್ಲಿ ಬಹಳಷ್ಟು ಎಚ್ಚೇರಿಕೆಯಿಂದ ಇರಬೇಕು,ಜಾತಿ ವ್ಯವಸ್ಥೆ ಬಂದಾಗ ನಾವೆಲ್ಲರೂ ಒಂದಾಗಬೇಕು,ನಾವೆಲ್ಲರೂ ಒಗ್ಗಟ್ಟಾಗಿ ಇದ್ದರೆ ಇಡಿ ರಾಜ್ಯವೇ ನಮ್ಮ ಮನೆ ಬಾಗಿಲಿಗೆ ಬರುತ್ತಾರೆ ಎಂದರು.

ಮಾದಿಗಾ ದಂಡೋರ ಹೋರಾಟ ಸಮಿತಿ ಅಧ್ಯಕ್ಷ ಮಲ್ಲು ಕೋಡಂಬಲ್ ಮಾತನಾಡಿ ಡಾ.ಬಾಬು ಜಗಜೀವನರಾಮ್ ಅವರ ಕೊಡುಗೆ ದೇಶಕ್ಕೆ ಅಪಾರವಾಗಿದೆ,ಬಾಬುಜೀಯವರು 14ನೇ ವರ್ಷದಲ್ಲಿ ಹೋರಾಟ ಮಾಡಿ ಬ್ರಿಟಿಷ್ ರಿಂದ ಲಾಠಿ ಹೇಟು ತಿಂದು ದೇಶಕ್ಕೆ ಅನ್ನವನ್ನು ನೀಡಿದ್ದಾರೆ.

ಜಿಲ್ಲೆಯಲ್ಲಿ ಅತಿದೊಡ್ಡ ಸಮಾಜ ಮಾದಿಗಾ ಸಮಾಜವಿದೆ ಆದರೆ ಜಿಪಂ.ತಾಪಂ.ಸದಸ್ಯರಿಲ್ಲ ಹಾಗಾಗಿ ಸಮಾಜದ ವಿಷಯ ಬಂದಾಗ ನಾವೆಲ್ಲರೂ ಒಂದಾಗಬೇಕು,ಕಳೆದ 30ವರ್ಷಗಳ ಹೋರಾಟದ ಫಲವಾಗಿ ಇಂದು ಒಳಮೀಸಲಾತಿ ಜಾರಿಗೆ ಬಂದಿದೆ ಅದರ ಸದುಪಯೋಗ ಪಡೆದುಕೊಳ್ಳಲು ಪ್ರತಿಯೊಬ್ಬರು ಶಿಕ್ಷಣ ಪಡೆದರೆ ಪ್ರತಿಶತಃ 5.5ರಷ್ಟು ಸರ್ಕಾರಿ ನೌಕರರು ಆಗಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿದಶರಥ ಕೋಟಗಾ,ಮೋಹನ್ ಐನಾಪೂರ,ಸ್ವಾಮಿದಾಸ್,ಶಾಮರಾವ ಓಂಕಾರ,ಮನೋಹರ್,ನರಸಪ್ಪ ಕೀವಣೋರಕರ್,ಗುಂಡಪ್ಪ,ಆಕಾಶ,ಮಂಜುನಾಥ್,ಚಂದಪ್ಪ,ನಾಗರಾಜ್ ಸಾಗರ್,ಬೀಮಣ್ಣ ಕೋಡಂಬಲ್,ಶಿವಕುಮಾರ,ಸಾವಿತ್ರಾ,ಲಕ್ಷ್ಮಿ,ರವಿ ಗಡಿಲಿಂಗದಳಿ,ಯಶ್ವಂತ,ಕಮಲಾಕರ್,ಸಂತೋಷ, ಶಿರುಮಣಿ,ಅನೇಕರಿದ್ದರು.

# ಪುರಸಭೆಯ ರಾಜಕೀಯ ಬೆಳವಣಿಗೆಗೆ ತೆರೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೆಂಭಾವಿ:**

ಕಳೆದ ಕೆಲವು ದಿನಗಳಿಂದ ತೀವ್ರ ಕುತೂಹಲ ಮೂಡಿಸಿದ್ದ ಕೆಂಭಾವಿ ಪುರಸಭೆಯ ರಾಜಕೀಯ ಬೆಳವಣಿಗೆಗೆ ಇಂದು ತೆರೆ ಬಿದ್ದಿದೆ. ಪುರಸಭೆ ಅಧ್ಯಕ್ಷೆ ಪ್ರಿಯಾ ರಾಮನಗೌಡ ಪೊಲೀಸ್ ಪಾಟೀಲ ಅವರ ವಿರುದ್ಧ ಸಲ್ಲಿಕೆಯಾಗಿದ್ದ ಅವಿಶ್ವಾಸ ನಿರ್ಣಯವು ಇಂದಿನ ವಿಶೇಷ ಸಭೆಯಲ್ಲಿ ಅಂಗೀಕಾರಗೊಂಡಿದ್ದು, ಅವರು ತಮ್ಮ ಅಧ್ಯಕ್ಷ ಸ್ಥಾನವನ್ನು ಕಳೆದುಕೊಂಡಿದ್ದಾರೆ.


**ಉಪ ವಿಭಾಗಾಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆ**

ಉಪ ವಿಭಾಗಾಧಿಕಾರಿಗಳ (ಸಹಾಯಕ ಆಯುಕ್ತರು) ಅಧ್ಯಕ್ಷತೆಯಲ್ಲಿ ಇಂದು (ಜುಲೈ 13) ಮಧ್ಯಾಹ್ನ 12 ಗಂಟೆಗೆ ವಿಶೇಷ ಸಭೆಯನ್ನು ಕರೆಯಲಾಗಿತ್ತು. ಪುರಸಭೆಯ ಒಟ್ಟು 23 ಸದಸ್ಯರ ಬಲದಲ್ಲಿ 16 ಸದಸ್ಯರು ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಮನವಿ ಸಲ್ಲಿಸಿದ್ದರು. ಇಂದಿನ ಸಭೆಯಲ್ಲಿ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಮತ ಚಲಾಯಿಸಿದ್ದು, ಬಹುಮತದ ಬೆಂಬಲದೊಂದಿಗೆ ಅವಿಶ್ವಾಸ ನಿರ್ಣಯ ಯಶಸ್ವಿಯಾಗಿದೆ. ಇದರ ಬೆನ್ನಲ್ಲೇ ಪ್ರಿಯಾ ರಾಮನಗೌಡ ಅವರ ಅಧ್ಯಕ್ಷ ಸ್ಥಾನವನ್ನು ಅಧಿಕೃತವಾಗಿ ರದ್ದುಗೊಳಿಸಲಾಗಿದೆ. ಕಾಂಗ್ರೆಸ್ ಪಕ್ಷದ ಆಂತರಿಕ ಭಿನ್ನಾಭಿಪ್ರಾಯ ಹಾಗೂ ಒಪ್ಪಂದದ ಅವಧಿ ಮುಗಿದ ನಂತರವೂ ರಾಜೀನಾಮೆ ನೀಡದ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿತ್ತು. ಸದ್ಯ ಅಧ್ಯಕ್ಷ ಸ್ಥಾನ ತೆರವಾಗಿದ್ದು, ನಿಯಮಾವಳಿಗಳ ಪ್ರಕಾರ ಶೀಘ್ರದಲ್ಲೇ ಹೊಸ ಅಧ್ಯಕ್ಷರ ಆಯ್ಕೆಗಾಗಿ ಚುನಾವಣಾ ಪ್ರಕ್ರಿಯೆಯನ್ನು ಅಧಿಕಾರಿಗಳು ಆರಂಭಿಸಲಿದ್ದಾರೆ. ಅಲ್ಲಿಯವರೆಗೂ ಮುಂದಿನ ಆಡಳಿತಾತ್ಮಕ ಜವಾಬ್ದಾರಿಯನ್ನು ಯಾರು ವಹಿಸಿಕೊಳ್ಳಲಿದ್ದಾರೆ ಎಂಬುದು ಕುತೂಹಲ ಮೂಡಿಸಿದೆ.

# ಎಸ್ಐಆರ್ ವಿಶೇಷ ಮತದಾರರ ಪರಿಷ್ಕರಣೆ ಯಶಸ್ವಿ

• **ಉದಯವಾಹಿನಿ ಕಾರಟಗಿ:**

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ನಡೆಯುತ್ತಿರುವ ವಿಶೇಷ ತೀವ್ರ ಮತದಾರರ ಪರಿಷ್ಕರಣೆ ಅಭಿಯಾನವು ಕಾರಟಗಿ ತಾಲ್ಲೂಕಿನಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ.ಸಿದ್ಧಾಪುರ ಹೋಬಳಿಯ ಒಂದನೇ ವಾರ್ಡ್ ನಲ್ಲಿ ಮನೆ-ಮನೆಗೆ ತೆರಳಿ ಮತದಾರರ ಪರಿಶೀಲನೆ ಎಸ್ಐಆರ್ ಎನ್ಯೂಮರೇಷನ್ ಫಾರ್ಮ್ ಭರ್ತಿ ಮಾಡುವ ಕಾರ್ಯವನ್ನು ಕೈಗೊಂಡರು.ಒಂದನೇ ವಾರ್ಡ್‌ನ ಶೀತಲ್ ಮ್ಯಾಡಂ ಅವರ ನೇತೃತ್ವದಲ್ಲಿ ಮತದಾರರಿಗೆ ಅಗತ್ಯ ಮಾಹಿತಿ ನೀಡಿ, ದಾಖಲೆಗಳನ್ನು ಪರಿಶೀಲಿಸಿ ಫಾರ್ಮ್‌ಗಳನ್ನು ಭರ್ತಿ ಮಾಡಲಾಯಿತು. ಸಮಾಜ ಸೇವೆಯಲ್ಲಿ ಸಕ್ರಿಯರಾಗಿರುವ ಯುವ ಮುಖಂಡ ಮೊಹಮ್ಮದ್ ಜಾಕೀರ್ ಹುಸೇನ್ ಅವರು ಶೀತಲ್ ಮ್ಯಾಡಂ ಅವರೊಂದಿಗೆ ಮನೆಮನೆಗೆ ತೆರಳಿ ಮತದಾರರಿಗೆ ಮಾರ್ಗದರ್ಶನ ನೀಡಿದರು. ಅವರೊಂದಿಗೆ ಹನುಮಂತ ಮ್ಯಾಗೇರಿ ಅವರು ಸಹ ಅಭಿಯಾನಕ್ಕೆ ಸಕ್ರಿಯವಾಗಿ ಸಹಕಾರ ನೀಡಿದರು.ಮತದಾರರ ಪಟ್ಟಿಯನ್ನು ನಿಖರ ಮತ್ತು ದೋಷರಹಿತವಾಗಿ ಪರಿಷ್ಕರಿಸುವ


ಉದಯವಾಹಿನಿ ಚಿತ್ರ

ಉದ್ದೇಶದಿಂದ ಕೈಗೊಂಡಿರುವ ಈ ಅಭಿಯಾನಕ್ಕೆ ಸಾರ್ವಜನಿಕರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ.ಎಲ್ಲಾ ಅರ್ಹ ಮತದಾರರು ಅಗತ್ಯ ದಾಖಲೆಗಳನ್ನು ಸಲ್ಲಿಸಿ ಪರಿಷ್ಕರಣೆ ಕಾರ್ಯದಲ್ಲಿ ಭಾಗವಹಿಸುವಂತೆ ಚುನಾವಣಾ ಅಧಿಕಾರಿಗಳು ಮನವಿ ಮಾಡಿದ್ದಾರೆ.

# ಪುರುಷ,ಮಹಿಳೆಯರ ಒಗ್ಗಟ್ಟಿನ ಸಪ್ತಭಜನೆಯ ಭಕ್ತಿ ಶ್ರದ್ಧೆ ನೋಡಿ ಮಳೆರಾಯನ ಆಗಮನವಾಗಲಿ :ಷ.ಬ್ರ.ಕರುಣೇಶ್ವರ ಶಿವಾಚಾರ್ಯರು

• **ಉದಯವಾಹಿನಿ,ಚಿಂಚೋಳಿ**

ತಾಲ್ಲೂಕಿನಲ್ಲಿ ರೈತರು ಬಿತ್ತನೆ ಮಾಡಿರುವ ಹೊಲಗದ್ದೆಗಳಲ್ಲಿ ಮಳೆ ಬಾರದೆ ಇರುವುದರಿಂದ ಇನ್ನು ಅನೇಕ ರೈತರು ಬಿತ್ತನೆ ಮಾಡದೆ ಇರುವುದರಿಂದ ರೈತರು ಕಂಗಾಲಾಗಿದ್ದು ಮಳೆರಾಯನ ಆಗಮನಕ್ಕಾಗಿ ಮಹಿಳೆಯರು ಪುರುಷರು ಸಪ್ತಭಜನೆ ಕಾರ್ಯಕ್ರಮವು ಅತ್ಯಂತ ಭಕ್ತಿ ಶ್ರದ್ಧೆಯಿಂದ ಮಾಡಿದ್ದು ಈಗಾಲಾದರೂ ಮಳೆರಾಯನ ಆಗಮನವಾಗಲಿವೆಂದು ನಿಡಗುಂದಾ ಕಂಚಾಳಕುಂಟಿ ನಂದೀಶ್ವರ ಮಠದ ಪರಮಪೂಜ್ಯ ಷ.ಬ್ರ.ಕರುಣೇಶ್ವರ ಶಿವಾಚಾರ್ಯರು ಪ್ರಾರ್ಥಿಸಿದರು.

ತಾಲ್ಲೂಕಿನ ಗಾರಂಪಳ್ಳಿ ಗ್ರಾಮದ ನಂದಿ ಬಸವೇಶ್ವರ ದೇವಾಸ್ಥಾನದಲ್ಲಿ ಟ್ರಸ್ಟ್ ವತಿಯಿಂದ ಮಳೆರಾಯನ ಆಗಮನಕ್ಕಾಗಿ ಸಪ್ತಭಜನೆ ಕಾರ್ಯಕ್ರಮ ಹಮ್ಮಿಕೊಂಡ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು,ದೇಶಕ್ಕೆ ಅನ್ನ ಕೊಡುವ ರೈತ,ದೇಶ ಕಾಯುವ ಯೋಧರು ಸುರಕ್ಷಿತವಾಗಿ ಇದ್ದರೆ ದೇಶವು ಚನ್ನಾಗಿ ಇರುತ್ತದೆ. ಮೊದಲು ತಂದೆ ತಾಯಂದಿರನ್ನು ಮೊದಲ ದೇವರೆಂದು ಆರೈಕೆ


ಉದಯವಾಹಿನಿ ಚಿತ್ರ

ಮಾಡಿ ಜೀವನ ಸುಗಮವಾಗಿ ನಡೆಯುತ್ತದೆ ಎಂದರು.

ಶಾಸಕ ಡಾ.ಅವಿನಾಶ ಜಾಧವ ಮಾತನಾಡಿ ಕ್ಷೇತ್ರದಲ್ಲಿ ಮಳೆಯ ಶೇಕಡಾ -63ಪ್ರತಿಶತಃ ಮಳೆಯ ಕೊರತೆಯಿಂದ ರೈತರು ಕಂಗಾಲಾಗಿದ್ದಾರೆ,ಚಿಂಚೋಳಿ ಬರಪೀಡಿತವೆಂದು ಘೋಷಿಸುವಂತೆ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ, ಮಳೆಯ ನೀರು ರೈತರು ಸೇರಿ ಪ್ರಾಣಿ ಪಕ್ಷಿಗಳಿಗೂ ಅವಶ್ಯಕ ವಾಗಿದೆ,ಕಸ್ಕೋಟಾ ಸಸ್ಯರೋಗದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದು ಪರಿಹಾರ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹಾಕಿದ್ದೇನೆ,ಪಕ್ಷಪಾತ ಮಾಡದೆ ಸಮಗ್ರ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದೇನೆ,ರಸ್ತೆ ಅಭಿವೃದ್ಧಿ,ಸಿಸಿ ರಸ್ತೆಗಳ ನಿರ್ಮಾಣ,ಕುಡಿಯುವ ನೀರು,ಮೂಲಭೂತ ಸೌಕರ್ಯ ಮಾಡಿದ್ದೇನೆ ಗಾರಂಪಳ್ಳಿ ಕೆಳಹಂತದ ಸೇತುವೆ ಮೇಲ್ದರ್ಜೆಗೆರಿಸಲು 19.20ಕೋಟಿ ರೂ.ಪ್ರಸ್ತಾವನೆ ಸಲ್ಲಿಸಿದ್ದು ಟೆಂಡರ್ ಪ್ರಕ್ರಿಯೆಯಲ್ಲಿದೆ,ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟಾರೆ 13ಕೋಟಿ ರೂ.ಗುಡಿ,ಗೋಪೂರ,ದರ್ಗಾಗಳ ಅಭಿವೃದ್ಧಿ ನೀಡಿದ್ದೇನೆ ಎಂದರು.ಬಳ್ಳಾರಿ ಕಮ್ಮರಚೇಡ ಮಠದ ಪರಮಪೂಜ್ಯ ಕಲ್ಯಾಣ ಮಹಾಸ್ವಾಮಿಗಳು ಮಾತನಾಡಿ ಮಹಿಳೆಯರು ಪುರುಷರು ಭಕ್ತಿ ಶೃದ್ಧೆಯಿಂದ ಸಪ್ತಭಜನೆ ಮಾಡಿದ್ದು ಹಳೆಯ ಸಂಪ್ರದಾಯ ಪದ್ಧತಿ ಪ್ರಕಾರ ಪ್ರಾಣಿ ಪಕ್ಷಿ ಮತ್ತು ರೈತರ ವೇಧನೆ ನಿಗಿಸಲು ಮಳೆಯ ಆಗಮನವಾಗಲಿದೆ ಎಂದರು.ಗುರುಪ್ರಸಾದ್ ಅಂಬಲಗಿ ಸ್ವಾಗತಿಸಿದರು,ಚನ್ನಬಸಯ್ಯ ನಿರೂಪಿಸಿದರು,ಬಸವರಾಜ ದೇಶಮುಖ ವಂದಿಸಿದರು.

ಈ ಸಂದರ್ಭದಲ್ಲಿ ಗೋಪಾಲ ಎಂಪಿ,ವೀರಭದ್ರಪ್ಪ ಮಲಕೂಡ,ಪ್ರಕಾಶ ಗುತ್ತೇದಾರ,ಹಣಮಂತ ಭೋವಿ,ಬಸವರಾಜ, ರಾಕೇಶ,ವೀರೇಶ ,ಮಲ್ಲಿಕಾರ್ಜುನ,ರಾಮಲಿಂಗಯ್ಯ ಮಠ,ಸಂಗನಬಸಯ್ಯ,ವೀರಶೆಟ್ಟಿ,ಮೋಹನ ಗುತ್ತೇದಾರ,ಸಂಗಪ್ಪ,ಶಿವಕುಮಾರ ಅಂಬಲಗಿ, ಜಗನ್ನಾಥ,ಬಸಂತಪ್ಪ,ರೇವಣಸಿದ್ದ,ಗುರುನಾಥ,ಅನೀಲ ಭೋವಿ, ಈಶ್ವರಮ್ಮ,ಮಲ್ಲಪ್ಪ ಹಡಪದ,ಸೋಮಶೇಖರ,ರಾಕೇಶ,ಕೆಎಂ.ಬಾರಿ, ಭೀಮಶೇಟ್ಟಿ ಮುರುಡಾ, ನಾಟೀಕಾರ,ಅನೇಕರಿದ್ದರು.

> ಚಿಂಚೋಳಿ ವಿಧಾನಸಭಾ ಮತಕ್ಷೇತ್ರದಲ್ಲಿ ಗುಡಿ,ಗೋಪೂರ,ದರ್ಗಾ ಅಭಿವೃದ್ಧಿಗಾಗಿ ಈಗಾಗಲೇ 13ಕೋಟಿ ರೂ.ನೀಡಿದ್ದೇನೆ,ಗಾರಂಪಳ್ಳಿ ಸೇತುವೆ ಮೇಲರ್ಜೆಗೆ ಏರಿಸಲು 19.20ಕೋಟಿ ರೂ. ಕ್ರೀಯಾಯೋಜನೆ ಸಿದ್ದಪಡಿಸಿ ಪ್ರಸ್ತಾವನೆ ಸಲ್ಲಿಸಲಾಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿದೆ,ಚಿಂಚೋಳಿ ಬರಪೀಡಿತ ಘೋಷಿಸಿ,ಏಕರೆಗೆ 50ಸಾವಿರ ರೂ.ನೀಡುವಂತೆ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ,ಕಸ್ಕೋಟಾ ಸಸ್ಯರೋಗದಿಂದ ಹಾಳಾದ ಬೆಳೆಗಳಿಗೆ ಪರಿಹಾರ ನೀಡುವಂತೆ ಈಗಾಗಲೇ ಅಧಿವೇಶನದಲ್ಲಿ ಧ್ವನಿ ಎತ್ತಿದ್ದೇನೆ.:
> - ಡಾ.ಅವಿನಾಶ ಜಾಧವ ಶಾಸಕರು,ಚಿಂಚೋಳಿ.

# ಎತ್ತಿನಹೊಳೆ ಯೋಜನೆ ಪೈಪ್‌ಲೈನ್ ಒಡೆದು ಭಾರೀ ಪ್ರಮಾಣದ ನೀರು ಪೋಲು!

## ಜಲಾವೃತಗೊಂಡಿದ್ದು ಸುಮಾರು 12 ಗಂಟೆಗಳಿಗೂ ಹೆಚ್ಚು ಕಾಲ ನೀರು ಹರಿದು ಹೋಗಿದೆ

• **ಉದಯವಾಹಿನಿ, ಹಾಸನ:**

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಯೋಜನೆಯ ಪೈಪ್ ಲೈನ್ ಒಡೆದು ಅಪಾರ ಪ್ರಮಾಣ ನೀರು ಪೋಲಾದ ಘಟನೆ ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕಿನ, ಹಲಸುಲಿಗೆ ಗ್ರಾಮದ ಬಳಿ ತಡರಾತ್ರಿ ನಡೆದಿದೆ. ಮುಗಿಲೆತ್ತರಕ್ಕೆ ನೀರು ಚಿಮ್ಮಿದ್ದು ರೈತರ ಜಮೀನುಗಳು

1 : 2008 ರಲ್ಲಿ 8,000 ಕೋಟಿ ರೂ
2 :ದ್ಯುತ್ ಪೂರೈಸುವ 220 ಕೆವಿ
3 : ಒಡೆಯುವ ಆತಂಕ ಎದುರಾಗಿದೆ

ಜಲಾವೃತಗೊಂಡಿದ್ದು ಸುಮಾರು 12 ಗಂಟೆಗಳಿಗೂ ಹೆಚ್ಚು ಕಾಲ ನೀರು ಹರಿದು ಹೋಗಿದೆ. ಘಟನಾ ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಾಮಗಾರಿ ಪೂರ್ಣಗೊಂಡು ನೀರು ಹರಿಸುವ ಮುನ್ನವೇ ಪೈಪ್‌ಲೈನ್‌ಗಳು ಒಡೆಯುತ್ತಿರುವುದರಿಂದ ಬಯಲು ಸೀಮೆಯ ಜಿಲ್ಲೆಗಳಿಗೆ ನೀರು ಹರಿಯಲಿದೆಯಾ ಎಂಬ ಅನುಮಾನ ಕಾಡುತ್ತಿದೆ.

2008 ರಲ್ಲಿ 8,000 ಕೋಟಿ ರೂ. ವೆಚ್ಚದಲ್ಲಿ ಆರಂಭಗೊಂಡ ಯೋಜನೆಯ ಮೊತ್ತ ಇದೀಗ 23 ಸಾವಿರ ಕೋಟಿಗೆ ಏರಿಕೆಯಾಗಿದೆ. ಬಯಲುಸೀಮೆ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು,



ಉದಯವಾಹಿನಿ ಚಿತ್ರ

ಬೆಂಗಳೂರು ಗ್ರಾಮಾಂತರ, ರಾಮನಗರ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಎತ್ತಿನಹೊಳೆ ಯೋಜನೆ ಮೊದಲ ಹಂತದ ನೀರೆತ್ತುವ ಯೋಜನೆ ಉದ್ಘಾಟನೆಗೊಂಡು 2 ವರ್ಷಗಳು ಕಳೆದರೂ ಯಾವ ಜಿಲ್ಲೆಗಳಿಗೂ ನೀರು ಹರಿಸಲು ಸಾಧ್ಯವಾಗಿಲ್ಲ. ಆದರೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿದ್ದು, ಆರಂಭದಲ್ಲೇ ನೀರಿನ ಒತ್ತಡ ತಡೆಯದೇ ಪೈಪ್‌ಲೈನ್‌ಗಳ ಜೋಡಣೆ ಕಿತ್ತು ಬರುತ್ತಿವೆ.

ಈ ಹಿಂದೆ ಸಕಲೇಶಪುರ ತಾಲ್ಲೂಕಿನ, ದೇಕ್ಲಾ ಗ್ರಾಮದ ಬಳಿ ಪೈಪ್‌ಲೈನ್ ಜೋಡಣೆ ಬಿಟ್ಟು ರಸ್ತೆ ಕೊಚ್ಚಿ ಹೋಗಿತ್ತು. ರೈತರ ಜಮೀನುಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ನಷ್ಟ ಉಂಟಾಗಿತ್ತು. ತಡರಾತ್ರಿ ಹಲಸುಲಿಗೆ ಗ್ರಾಮದ ಬಳಿ ಪೈಪ್‌ಲೈನ್ ಒಡೆದಿದೆ. ನೀರಿನ ಶಬ್ಧಕ್ಕೆ ಸ್ಥಳೀಯರು ಆತಂಕಗೊಂಡಿದ್ದು, ಬೆಳಗ್ಗೆ ರೈತರು ತಮ್ಮ ಜಮೀನಿಗಳಿಗೆ ತೆರಳುತ್ತಿದ್ದ ವೇಳೆ ಬಾನೆತ್ತರಕ್ಕೆ ನೀರು

> ಕಳೆದ 4-5 ದಿನಗಳಿಂದ ಮಲೆನಾಡು ಭಾಗದಲ್ಲಿ ಮಳೆ ಸುರಿದಿದ್ದರಿಂದ ಕೆಂಪುಹಳ್ಳದಲ್ಲಿ ಭಾರಿ ನೀರು ಹರಿಯುತ್ತಿದ್ದು ಪ್ರಾಯೋಗಿಕವಾಗಿ ಹಳೇಬೀಡು ಕೆರೆಗೆ ನೀರು ಹರಿಸಲಾಗಿದ್ದು, ಕೆರೆ ಕೋಡಿ ಬಿದ್ದು ಚಿತ್ರದುರ್ಗದ ವಾಣಿವಿಲಾಸ ಸಾಗರಕ್ಕೆ ನೀರು ಹರಿಯುತ್ತಿದೆ.

ಚಿಮ್ಮುತ್ತಿರುವುದನ್ನ ಕಂಡು ಅಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ. ರೈತರು ಜಮೀನಿಗಳಿಗೆ ತೆರಳುವ ರಸ್ತೆಗೆ ನೀರು ಬಲವಾಗಿ ಚಿಮ್ಮುತ್ತಿದ್ದ ಕಾರಣ ರೈತರು ಜಮೀನಿಗೆ ತೆರಳಲು ಪರದಾಡಬೇಕಾಯಿತು. ಅಲ್ಲದೇ ಎತ್ತಿನಹೊಳೆ ಯೋಜನೆಗೆ ವಿದ್ಯುತ್ ಪೂರೈಸುವ 220 ಕೆವಿಯ ವಿದ್ಯುತ್ ತಂತಿಗಳು, ಟವರ್‌ಗಳಿಗೂ ನೀರು ಬೀಳುತ್ತಿದ್ದು ಸುದ್ದಿ ತಿಳಿದ ಕೂಡಲೇ ಚೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಆಗುವ ಅಪಾಯ ತಪ್ಪಿಸಿದ್ದಾರೆ.

ಗುರುತ್ವಾಕರ್ಷಣೆ ಮೂಲಕ ಬೃಹತ್ ಪೈಪ್‌ಗಳಲ್ಲಿ ರಭಸವಾಗಿ ನೀರು ಹರಿಯುತ್ತಿರುವುದರಿಂದ ಪೈಪ್‌ಲೈನ್‌ಗಳು ಬಿರುಕು ಬಿಡುತ್ತಿದ್ದು, ನೀರು ಪೋಲಾಗುತ್ತಿದೆ. ಸಕಲೇಶಪುರ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ರೈತರ ಬೆಳೆ ಹಾನಿಯಾಗಿದ್ದರೆ ಸೂಕ್ತ ಪರಿಹಾರ ನೀಡುವಂತೆ ಎತ್ತಿನಹೊಳೆ ಯೋಜನೆ ಇಂಜಿನಿಯರ್‌ಗೆ ಸೂಚನೆ ನೀಡಿದರು.

> ಕಳಪೆ ಹಾಗೂ ಅವೈಜ್ಞಾನಿಕವಾಗಿ ಕಾಮಗಾರಿ ಮಾಡಲಾಗಿದ್ದು, ಯೋಜನೆ ಪೂರ್ಣಗೊಂಡು ಸಂಪೂರ್ಣ ನೀರು ಹರಿಸಿದರೆ ಹಲವೆಡೆ ಪೈಪ್‌ಲೈನ್‌ಗಳು ಒಡೆಯುವ ಆತಂಕ ಎದುರಾಗಿದೆ ಎಂದು ಆರೋಪಿಸಿದ್ದಾರೆ.
> -ಸ್ಥಳೀಯರು

ಒಟ್ಟಿನಲ್ಲಿ ಎತ್ತಿನಹೊಳೆ ಯೋಜನೆ ಕಾಮಗಾರಿ ಆರಂಭಗೊಂಡು ಒಂದೂವರೆ ದಶಕ ಕಳೆದರು ಇದುವರೆಗೆ ಕಾಮಗಾರಿ ಪೂರ್ಣಗೊಂಡಿಲ್ಲ. ಇದರ ನಡುವೆ ಪ್ರಾಯೋಗಿಕವಾಗಿ ನೀರು ಹರಿಸುತ್ತಿದ್ದು ಅಧಿಕ ಒತ್ತಡದಿಂದ ಪೈಪ್‌ಗಳು ಬಿರುಕು ಹಾಗೂ ಒಡೆದು ಹಲವು ಅನಾಹುತಗಳು ಸೃಷ್ಟಿಯಾಗುತ್ತಿದ್ದು, ಇದರ ತಡೆಗೆ ಯಾವ ರೀತಿಯ ಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ಮುಂದಿನ ದಿನಗಳಲ್ಲಿ ಕಾದುನೋಡಬೇಕಿದೆ.

# ಮಿನಿ ನ್ಯೂಸ್

## ವಿಷ ಸೇವಿಸಿದ್ದ ಮಹಿಳೆ ಚಿಕಿತ್ಸೆ ಫಲಿಸದೆ ಸಾವು

• **ಉದಯವಾಹಿನಿ, ದಾವಣಗೆರೆ:**

ಆಸ್ತಿ ವಿವಾದದ ಹಿನ್ನೆಲೆಯಲ್ಲಿ ಜಮೀನಿನಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ಸೋನಾ ಬಾಯಿ(48) ಎಂಬವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ್ದಾರೆ. ದಾವಣಗೆರೆ ತಾಲೂಕಿನ ಹೆಬ್ಬಾಳು ಬಡಾವಣೆಯಲ್ಲಿ ಘಟನೆ ನಡೆದಿದೆ. ಮಹಿಳೆ ಜಮೀನಿನಲ್ಲಿ ವಿಷ ಸೇವಿಸುವ ದೃಶ್ಯ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಮೂಲಗಳ ಪ್ರಕಾರ, ಹೆಬ್ಬಾಳು ಬಡಾವಣೆಯ ನಿವಾಸಿಯಾಗಿರುವ ಸೋನಾಬಾಯಿಗೆ ಮೈದುನ ಹನುಮಂತ ನಾಯ್ಕ್ ಎಂಬವರೊಂದಿಗೆ ಆಸ್ತಿ ವಿವಾದವಿತ್ತು. ಮೃತಪಟ್ಟ ತನ್ನ ಗಂಡನ ಪಾಲಿನ ಆಸ್ತಿಯನ್ನು ಸೋನಾಬಾಯಿ ಕೇಳುತ್ತಿದ್ದರು. ಈ ವಿವಾದದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಇದರ ನಡುವೆ ವಿವಾದಿತ ಜಮೀನಿನಲ್ಲಿ ಹನುಮಂತ ನಾಯ್ಕ್ ಬಿತ್ತನೆಗೆ ಮುಂದಾಗಿದ್ದರು. ಇದನ್ನು ಪ್ರಶ್ನಿಸಲು ಹೋಗಿದ್ದ ಸೋನಾಬಾಯಿ ಮೇಲೆ ಟ್ರ್ಯಾಕ್ಟರ್ ಹತ್ತಿಸುವ ಯತ್ನ ನಡೆದಿದೆ. ಇದರಿಂದ ಮನನೊಂದು ಟ್ರ್ಯಾಕ್ಟರ್ ಎದುರು ಕುಳಿತು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ನಂತರ ಅವರನ್ನು ತಕ್ಷಣ ತಡೆದು ಆಸ್ಪತ್ರೆಗೆ ದಾಖಲಿಸಲಾಯಿತು.ಚಿಕಿತ್ಸೆ ಪಡೆಯುತ್ತಿದ್ದಾಗ ದಾವಣಗೆರೆ ಜಿಲ್ಲಾಸ್ಪತ್ರೆಯಲ್ಲಿ ಸಾವನ್ನಪ್ಪಿದರು ಎಂದು ಸೋನಾಬಾಯಿ ಅವರ ಮಕ್ಕಳು ತಿಳಿಸಿದ್ದಾರೆ.ಈ ಘಟನೆಯಿಂದ ಆಕ್ರೋಶಗೊಂಡ ಕುಟುಂಬಸ್ಥರು, ಗ್ರಾಮಸ್ಥರು ಪೊಲೀಸ್ ಠಾಣೆಗೆ ನುಗ್ಗಲು ಯತ್ನಿಸಿದ್ದು, ಪೊಲೀಸರು ತಡೆದು ಸಮಾಧಾನಪಡಿಸಿದ್ದಾರೆ. ಹನುಮಂತ ನಾಯ್ಕ್ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ ಕೇಳಿಬಂದಿದೆ. ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಡಾಂಬರ್ ಸೋರಿಕೆ: ಪರಿಸರ ಹಾನಿ ಆತಂಕ

• **ಉದಯವಾಹಿನಿ, ಕಾರವಾರ:**

ನಗರದ ಬೈತಕೋಲ್ ವಾಣಿಜ್ಯ ಬಂದರಿನಲ್ಲಿ ಹಡಗಿನಿಂದ ಡಾಂಬರ್ ಅನ್‌ಲೋಡ್ ಮಾಡುವ ವೇಳೆ ಪೈಪ್‌ಲೈನ್ ಒಡೆದು ಸಾವಿರಾರು ಲೀಟರ್ ಬಿಸಿ ಡಾಂಬರ್ ಸಮುದ್ರಕ್ಕೆ ಸೋರಿಕೆಯಾದ ಘಟನೆ ಶನಿವಾರ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಮಧ್ಯಪ್ರಾಚ್ಯದಿಂದ ಡಾಂಬರ್ ಸಾಗಾಟ ಮಾಡಿಕೊಂಡು ಬಂದ ಮರಿನ್ ಫ್ಯೂಯಲ್ ಕಂಪನಿಗೆ ಸೇರಿದ ಬೃಹತ್ ಹಡಗಿನಿಂದ ಅಲಿಗದ್ದಾದ ಎಂಎಸಿಎಲ್ ಕಂಪನಿಗೆ ಸೇರಿದ ಡಾಂಬರ್ ಅನ್ನು ಕಾರವಾರದ ಬೈತಕೋಲ್ ಬಂದರಿನಲ್ಲಿ ಇಳಿಸಲಾಗುತ್ತಿತ್ತು. ಈ ವೇಳೆ, ಡಾಂಬರ್ ಪಂಪ್ ಮಾಡುವ ಪೈಪ್‌ಲೈನ್‌ನಲ್ಲಿ ಏಕಾಏಕಿ ಅತಿಯಾದ ಒತ್ತಡ ಉಂಟಾಗಿ ಪೈಪ್ ಸಿಡಿದು ಡಾಂಬರ್ ಹೊರಕ್ಕೆ ಚಿಮ್ಮಿದೆ. ಘಟನೆ ನಡೆದ ಬಳಿಕ ಕೆಲಕಾಲ ಸೋರಿಕೆಯನ್ನು ನಿಯಂತ್ರಿಸಲು ಸಾಧ್ಯವಾಗದೇ, ಸಾವಿರಾರು ಲೀಟರ್ ಬಿಸಿ ಡಾಂಬರ್ ನೇರವಾಗಿ ಸಮುದ್ರಕ್ಕೆ ಹರಿದು ಹೋಗಿದೆ ಎಂದು ತಿಳಿದುಬಂದಿದೆ. ಹಡಗಿನ ಸಿಬ್ಬಂದಿಯ ನಿರ್ಲಕ್ಷ್ಯ ಹಾಗೂ ಕಾರ್ಯಾಚರಣೆಯಲ್ಲಿನ ಲೋಪವೇ ಘಟನೆಗೆ ಪ್ರಮುಖ ಕಾರಣ ಎಂಬ ಆರೋಪ ಕೇಳಿಬಂದಿದೆ. ಪರಿಸರ ತಜ್ಞರ ಆತಂಕ: ರಾಸಾಯನಿಕ ಅಂಶಗಳನ್ನು ಒಳಗೊಂಡಿರುವ ಬಿಸಿ ಡಾಂಬರ್ ಸಮುದ್ರ ಸೇರುವುದರಿಂದ ಜಲಚರಗಳ ಜೀವಿತ, ಸಮುದ್ರ ಜೀವವೈವಿಧ್ಯ ಹಾಗೂ ಕರಾವಳಿ ಪರಿಸರ ವ್ಯವಸ್ಥೆಯ ಮೇಲೆ ಗಂಭೀರ ದುಷ್ಪರಿಣಾಮ ಉಂಟಾಗುವ ಸಾಧ್ಯತೆ ಇದೆ ಎಂದು ಪರಿಸರ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.


ಉದಯವಾಹಿನಿ ಚಿತ್ರ

## ಹಳ್ಳದಲ್ಲಿ ಈಜಲು ಹೋದ ಇಬ್ಬರು ನೀರುಪಾಲು

• **ಉದಯವಾಹಿನಿ, ಶಿರಸಿ:**

ಈಜಲು ತೆರಳಿದ್ದ ಇಬ್ಬರು ಯುವಕರು ನೀರಿನಲ್ಲಿ ಮುಳುಗಿ ಮೃತಪಟ್ಟ ಹೃದಯವಿದ್ರಾಹಕ ಘಟನೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಉಂಚಳ್ಳಿ ಸಮೀಪದ ಮಾಸ್ತಿಜಡ್ಡಿ ಹಳ್ಳದಲ್ಲಿ ಭಾನುವಾರ ನಡೆದಿದೆ. ಮಾಸ್ತಿಜಡ್ಡಿ ಗ್ರಾಮದ ಹರ್ಷ ಮಂಜುನಾಥ ನಾಯ್ಕ (19) ಹಾಗೂ ಹೊನ್ನಾವರ ತಾಲೂಕಿನ ಮಣ್ಣಿಗೆ ಗ್ರಾಮದ ಮದನ ಗಜಾನನ ನಾಯ್ಕ (19) ಮೃತಪಟ್ಟ ಯುವಕರು. ಕಾಲೇಜಿಗೆ ರಜೆ ಇದ್ದ ಹಿನ್ನೆಲೆಯಲ್ಲಿ ಹರ್ಷ, ಮದನ ಹಾಗೂ ಇಬ್ಬರು ಬಾಲಕಿಯರು ಸೇರಿ ಉಂಚಳ್ಳಿ ಸಮೀಪದ ಮಾಸ್ತಿಜಡ್ಡಿ ಹಳ್ಳದ ಬಾಂದಾರ್ ಪ್ರದೇಶಕ್ಕೆ ತೆರಳಿದ್ದರು.

ಈ ವೇಳೆ, ಹರ್ಷ ಮತ್ತು ಮದನ ಈಜುತ್ತಿದ್ದಾಗ ನೀರಿನ ರಭಸ ಹೆಚ್ಚಾಗಿ ಸುಮಾರು 15 ಅಡಿ ಆಳದ ಪ್ರದೇಶದಲ್ಲಿ ಮುಳುಗಿ ಕಣ್ಮರೆಯಾಗಿದ್ದಾರೆ. ಹಳ್ಳದ ದಡದಲ್ಲಿದ್ದ ಬಾಲಕಿಯರು ತಕ್ಷಣ ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದು, ಸ್ಥಳೀಯರು ರಕ್ಷಣಾ ಕಾರ್ಯಕ್ಕೆ ಮುಂದಾಗಿದ್ದಾರೆ. ಬಳಿಕ ಶ್ರೀ ಮಾರಿಕಾಂಬ ಆಪತ್ಬಾಂಧವ ಸೇವಾ ತಂಡದ ಗೋಪಾಲ ಗೌಡ ಅವರ ನೇತೃತ್ವದ ತಂಡ ಸ್ಥಳಕ್ಕೆ ಧಾವಿಸಿ ಶೋಧ ಕಾರ್ಯ ನಡೆಸಿ ಇಬ್ಬರ ಮೃತದೇಹಗಳನ್ನು ಮೇಲಕ್ಕೆತ್ತಿದೆ.

ಘಟನಾ ಸ್ಥಳಕ್ಕೆ ಬನವಾಸಿ ಠಾಣೆಯ ಪಿಎಸ್ಐ ಮಹಾಂತಪ್ಪ ಕುಂಬಾರ ಹಾಗೂ ತನಿಖಾ ಪಿಎಸ್ಐ ರವೀಂದ್ರ ಬಿರಾದಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹಗಳನ್ನು ಶಿರಸಿ ನಗರದ ಪಂಡಿತ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಈ ಕುರಿತು ಬನವಾಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾಳಗಿಯಲ್ಲಿ ರೈತರಿಂದ ಬೃಹತ್ ಪ್ರತಿಭಟನೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕಾಳಗಿ :**

ಮುಂಗಾರು ಮಳೆ ಕೈಕೊಟ್ಟಿದ್ದು, ಬೆಳೆ ಬೆಳೆಯಲಾಗದ ಸಂಕಷ್ಟಕ್ಕೆ ಸಿಲುಕಿರುವ ತಾಲ್ಲೂಕಿನ ರೈತವರ್ಗ ಸೋಮವಾರ ರಸ್ತೆಗಿಳಿದು ಹೋರಾಟ ನಡೆಸಿದರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ತಾಲ್ಲೂಕು ಘಟಕ ಕರೆ ನೀಡಿದ ಹೋರಾಟಕ್ಕೆ ವಿವಿಧ ಮಠಾಧೀಶರು, ಸುತ್ತಲಿನ ನೂರಾರು ರೈತರು ಪಾಲ್ಗೊಂಡಿದ್ದರು.

ಹಸಿರು ಶಾಲು ಹೆಗಲಿಗೇರಿಸಿಕೊಂಡು ಎತ್ತಿನಬಂಡಿ, ಟ್ರ್ಯಾಕ್ಟರ್‌ಗಳೊಂದಿಗೆ ಪಟ್ಟಣದ ಮುಖ್ಯ ಬಜಾರ್ ಒಳಗಿನ ಬಸವೇಶ್ವರ ವೃತ್ತದಿಂದ ಕಲಬುರಗಿ-ಚಿಂಚೋಳಿ ಮುಖ್ಯರಸ್ತೆ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ವೃತ್ತಕ್ಕೆ ಮೆರವಣಿಗೆಯಲ್ಲಿ ಬಂದರು.

'ಸಮರ್ಪಕ ಮಳೆಯಾಗದೇ, ಬಿತ್ತನೆಯನ್ನೂ ಮಾಡದೇ ರೈತರು ಬೀಜ-ಗೊಬ್ಬರ ಖರೀದಿಸಿ ಕೈಸುಟ್ಟುಕೊಂಡಿದ್ದಾರೆ.ಕೂಡಲೇ ರೈತರಿಗೆ ಪರಿಹಾರ ಒದಗಿಸಬೇಕು' ಎಂದು ಆಗ್ರಹಿಸಿದರು.'ಜನ-ಜಾನುವಾರು ಕುಡಿಯುವ ನೀರು, ಮೇವು ಕಾಣದ ಸ್ಥಿತಿ ತಲೆದೋರಬಹುದು ಕೂಡಲೇ ಈ ತಾಲ್ಲೂಕನ್ನು ಬರಗಾಲ ಪ್ರದೇಶವನ್ನಾಗಿ ಘೋಷಣೆ ಮಾಡಬೇಕು' ಎಂದು ಸರ್ಕಾರಕ್ಕೆ ಒತ್ತಾಯಿಸಿದರು. 'ಸಾಲ ಮನ್ನಾ ಮಾಡಬೇಕು. ಬೆಳೆ ವಿಮೆ ಮಂಜೂರು ಮಾಡಬೇಕು. ಜಾನುವಾರುಗಳಿಗೆ ಪೋಷಣೆ ವ್ಯವಸ್ಥೆ ಮಾಡಬೇಕು' ಎಂಬ ಹಲವು ಬೇಡಿಕೆಗಳನ್ನು ರೈತರು ಸರ್ಕಾರದ ಮುಂದಿಟ್ಟರು.

